# ಅಧ್ಯಾಯ 10

# ನ್ಯಾಯ ಮತ್ತು ಶಾಂತಿಪಾಲನೆ

**ಈ** ಜಿಲ್ಲೆಯಲ್ಲಿ ಹಿಂದಿನ ರಾಜರ ಆಳ್ವಿಕೆಯಲ್ಲಿ ನ್ಯಾಯಾಡಳಿತದ ವಿಧಾನವು ಸಾಂಪ್ರದಾಯಿಕ ರೂಢಿಗಳನ್ನು ಅವಲಂಬಿಸಿತ್ತು. ಈ ಸಾಂಪ್ರದಾಯಿಕ ವಿಧಾನಗಳನ್ನು ಜಾರಿಗೆ ತರಲು ಪ್ರತ್ಯೇಕ ಪೋಲೀಸ್ ವ್ಯವಸ್ಥೆಯ ಅಗತ್ಯವಿರಲಿಲ್ಲ. ಜಮ್ಮ ಭೂಮಿ ಪಡೆದಿದ್ದ ರೈತರೇ ಕಾವಲು, ಪೋಲೀಸು ಹಾಗೂ ಸೈನಿಕರಾಗಿ ಕೆಲಸ ಮಾಡುತ್ತಿದ್ದು ಕೊಡಗು ಸಂಸ್ಥಾನವು ಚಿಕ್ಕದಾಗಿದ್ದುದರಿಂದ ಪೂರ್ಣವಾಗಿ ಎಲ್ಲಾ ಪ್ರದೇಶದಲ್ಲಿಯೂ ಆಡಳಿತವು ಅರಮನೆಯ ನಿಯಂತ್ರಣದಲ್ಲಿತ್ತು. ಯಾವುದೇ ರೀತಿಯ ದಂಡನಾರ್ಹವಾದ ಕೃತ್ಯವೂ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿಯಾಗುತ್ತಿತ್ತು. ಕೆಲವು ತಿಳಿದಿರುವ ಕಾಡಿನ ದಾರಿಗಳ ಮಾರ್ಗಗಳ ವಿನಾ ಕೊಡಗಿನಲ್ಲಿ ಹೊರಗಿನವರ ಆಗಮನವಾಗಲೀ, ನಿರ್ಗಮನವಾಗಲೀ ಅಷ್ಟೊಂದು ಇರಲಿಲ್ಲ. ಒಂದೊಂದು ಗ್ರಾಮ ಮತ್ತು ನಾಡನ್ನು ಬೇರ್ಪಡಿಸಲು ಆಳವಾದ ಕಡಂಗ ಅಥವಾ ಕಂದಕಗಳಿದ್ದು ಅವುಗಳ ನಡುವೆ ಜನರ ಓಡಾಟಕ್ಕೆ ಬಕ್ಕಬಾಗಿಲು ಎಂಬ ಸಂಪರ್ಕದ ದಾರಿಗಳಿದ್ದು ಅಲ್ಲಿ ಕಾವಲುಗಾರರು ಇರುತ್ತಿದ್ದರು. ಜಿಲ್ಲೆಯ ಎಲ್ಲಾ ರಸ್ತೆಯ ದ್ವಾರ ಪ್ರದೇಶಗಳಲ್ಲಿಯೂ, ರಕ್ಷಣಾಗೃಹ ಅಥವಾ ಚೌಕಿಠಾಣೆಗಳನ್ನು ಕಟ್ಟಿಸಲಾಗಿತ್ತು; ಮತ್ತು ಪ್ರತೀ ಪ್ರವಾಸಿಯನ್ನು ತನಿಖೆ ಮಾಡಿದ ನಂತರವೇ ಒಳಗೆ ಬಿಡಲಾಗುತ್ತಿತ್ತು. ಇತರ ಸಂಸ್ಥಾನಗಳಲ್ಲೂ ಇದ್ದಂತೆ ಕೊಡಗು ಸೀಮೆಗೆ ಬರಲು ರಹದಾರಿ ಪತ್ರ ಅಗತ್ಯವಾಗಿದ್ದಿತು. ಸೀಮೆಯಲ್ಲಿನ ಜನರು, ಸೀಮೆಯನ್ನು ಬಿಟ್ಟು ಹೋಗುವಾಗ ಸರ್ಕಾರದಿಂದ ಅನುಮತಿ ಪಡೆದು ಹೋಗಬೇಕಾಗಿದ್ದಿತು. ಅನುಮತಿಯಿಲ್ಲದೆ ಯಾವ ಪ್ರಜೆಯನ್ನೂ ಹೊರ ಹೋಗಲು ಬಿಡುತ್ತಿರಲಿಲ್ಲ; ಹಾಗೂ ಹೊರ ಹೋಗಲು ಸರಿಯಾದ ಕಾರಣಗಳನ್ನು ಕೊಡಬೇಕಾಗಿದ್ದಿತು. ಯಾವುದೇ ಪ್ರಜೆಯು, ಸಂಸ್ಥಾನವನ್ನು ಸೂಕ್ತ ಪರವಾನಗಿಯಿಂದ ಬಿಟ್ಟು ಹೋಗುವಾಗ, ಆತನ ಕುಟುಂಬದ ಸದಸ್ಯರು ಅಲ್ಲಿಯೇ ಇರಬೇಕಾಗಿದ್ದಿತು. ಇದರಿಂದ ಆತನ ಹಿಂತಿರುಗಿ ಬರುವಿಕೆಯು ಖಾತ್ರಿಯಾಗುತ್ತಿತ್ತು. ಕೊಡಗಿನ ಹವೆ, ವಾತಾವರಣ ಬೇರೆಯವರಿಗೆ ಹಿತಕರವಾಗಿಲ್ಲದ್ದರಿಂದ ಜನಸಂಖ್ಯೆ ಕಡಿಮೆಯಾಗುವುದನ್ನು ತಡೆಯಲು ಜನರು ವಲಸೆ ಹೋಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು. ಯಾವುದೇ ರೀತಿಯ ದಂಡನಾರ್ಹವಾದ ಅಪರಾಧವನ್ನು ಮಾಡಿದವರಿಗೆ, ಸೂಕ್ತ ಶಿಕ್ಷೆಗಳನ್ನು ನಿಸ್ಸಂಕೋಚವಾಗಿ ವಿಧಿಸಲಾಗುತ್ತಿತ್ತು. ಈ ಕಾರಣಗಳಿಂದ, ಹತ್ತಿರದ ಸಂಸ್ಥಾನದವರು, ಕೊಡಗು ಸಂಸ್ಥಾನವನ್ನು ತಪ್ಪಿಸಿಕೊಂಡು ಹೋಗಲಾಗದಂತಹ ಬಂದೀಖಾನೆ ಎಂದು ವಿಶ್ಲೇಷಿಸಿದ್ದಾರೆ.

ರಾಜರ ಆಳ್ವಿಕೆಯಲ್ಲಿ ಪ್ರತ್ಯೇಕವಾದ ಪೋಲೀಸ್ ಬಲವಿರಲಿಲ್ಲ. ಎಲ್ಲಾ ಸರಕಾರೀ ಕಚೇರಿಗಳಲ್ಲಿನ ಪೇದೆಗಳು, ಪೋಲೀಸರ ಕಾರ್ಯವನ್ನು ಮಾಡುತ್ತಿದ್ದರು. ಕೊಡಗು ಸಂಸ್ಥಾನದಲ್ಲಿ ಘರ್ಷಣೆಗಳಾಗಲೀ, ಗಲಭೆಗಳಾಗಲೀ ಇದ್ದಂತೆ ಕಂಡುಬಂದಿಲ್ಲ. ಮತ್ತು ಸಾರ್ವಜನಿಕರ, ಶಾಂತಿಯುತ ಮತ್ತು ವ್ಯವಸ್ಥಿತ ರೀತಿನೀತಿಯಲ್ಲಿ ಸರ್ಕಾರವು ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಖಾಸಗಿಯಾಗಿ ಆಸ್ತಿಯನ್ನು ಹೊಂದುವುದನ್ನಾಗಲೀ, ಶೇಖರಣೆಯಲ್ಲಾಗಲೀ, ಸರ್ಕಾರ ಅಡ್ಡಿ ಬರುತ್ತಿರಲಿಲ್ಲ; ಮತ್ತು ಕಳ್ಳತನವಾಗಲೀ, ಆಡಳಿತದಲ್ಲಿ ಹಣದ

ಸೋರಿಕೆಯಾಗಲೀ ವಿಶೇಷವಾಗಿ ಕಂಡುಬಂದಿರಲಿಲ್ಲ. ಹೆದ್ದಾರಿ ದರೋಡೆಗಳಾಗಲೀ, ಸಾಮಾಜಿಕ ಅಪರಾಧಗಳಾಗಲೀ, ಇತರ ಸಂಸ್ಥಾನಗಳಲ್ಲಿದ್ದಂತೆ, ಈ ಸಂಸ್ಥಾನದಲ್ಲಿ ಇರಲಿಲ್ಲ. ಒಬ್ಬ ಸಾಮಾನ್ಯ ಪ್ರವಾಸಿಗನ ಆಸ್ತಿ-ಪಾಸ್ತಿಗಳಿಗೂ ಕೂಡ ಸಾಕಷ್ಟು ಭದ್ರತೆ ಇದ್ದಿತು. ಆಗುಂತಕರನ್ನು ಎಚ್ಚರಿಕೆಯಿಂದ ನೋಡು ತ್ತಿದ್ದು ಅವರು, ಸಂಸ್ಥಾನದ ಜನರೊಡನೆ ಮುಕ್ತವಾಗಿ ಬೆರೆ ಯಲು ಅವಕಾಶವಿರುತ್ತಿರಲಿಲ್ಲ. ಮಲಬಾರಿನ ನಾಯರ್ ಗಳಂತೆ, ಇಲ್ಲಿನ ಪ್ರತೀ ರೈತನೂ ಪೋಲೀಸ್ ಕಾರ್ಯವನ್ನು ನಿರ್ವಹಿಸುತ್ತಿದ್ದ ಸಿಪಾಯಿಯಾಗಿದ್ದನು. ಇಲ್ಲಿಯ ಬಹುಪಾಲು ಜನತೆ ಭೂಮಿಯ ಒಡೆತನವನ್ನು ಮಿಲಿಟರಿ ಆಡಳಿತದಲ್ಲಿ ಹೊಂದಿದ್ದರು ಮತ್ತು ಅಲ್ಲಿಯ ಜನರನ್ನು ಸಂರಕ್ಷಿಸುವ ಭಾರವೂ ಅವರಲ್ಲಿತ್ತು. ಅವರುಗಳೆಂದರೆ ಸರ್ವಕಾರ್ಯಕಾರರು, ಕಾರ್ಯಕಾರರು, ಸುಬೇದಾರರು ಮತ್ತು ಜಮೇದಾರರು. ಪೋಲಿಸರಿಗೆ ಸಹಾಯವಾಗಿ ಜಮ್ಮಾದ ರೈತರೂ ಇರುತ್ತಿದ್ದರು.

ಬೇರೆ ಜಿಲ್ಲೆಗಳಂತೆ ಈ ಜಿಲ್ಲೆಯಲ್ಲಿಯೂ, ಪ್ರಾಚೀನ ಕಾಲ ದಲ್ಲಿ ಪ್ರತ್ಯೇಕ ನ್ಯಾಯಾಲಯಗಳ ಅವಶ್ಯಕತೆ ಇರಲಿಲ್ಲ. ಕುಟುಂಬದ ಮುಖ್ಯಸ್ಥನೇ ತನ್ನ ಅನುಭವದಿಂದ ಕುಟುಂಬ ದಲ್ಲಿನ ಕಲಹಗಳನ್ನು ತೀರ್ಮಾನಿಸುತ್ತಿದ್ದನು. ಹಾಗೆಯೇ ಗ್ರಾಮದ ಮುಖ್ಯಸ್ಥನಾದ 'ತಕ್ಕ'ನು ನ್ಯಾಯಾಧಿಪತಿಯಾಗಿರು ತ್ತಿದ್ದನು. ಗ್ರಾಮದ ಮುಖ್ಯಸ್ಥರು ಅವರವರ ಧರ್ಮ ಹಾಗೂ ಕಟ್ಟಳೆಗಳನುಗುಣವಾಗಿ, ತೀರ್ಪನ್ನು ಕೊಡುತ್ತಿ ದ್ದರು. ತಕ್ಕರು ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಯ ನ್ಯಾಯಾಲಯಗಳಿಗೆ ಮುಖ್ಯಸ್ಥರಾಗಿರುತ್ತಿದ್ದರು. ಒಬ್ಬ ಅಪರಾಧಿಯನ್ನು ವಿಚಾರಣೆಗೊಳಪಡಿಸುವಾಗ ಕನಿಷ್ಠ ದರ್ಜೆಯ ಅಧಿಕಾರಿಯನ್ನು ನೇಮಕ ಮಾಡಲು ಅವಕಾಶ ವಿದ್ದಿತು. ಕಳ್ಳತನ ಅಥವಾ ಸರ್ಕಾರಿ ಹಣದ ದುರುಪಯೋಗ ಮೊದಲಾದ ಅಪರಾಧಗಳಿಗೆ, ಕಳೆದುಹೋದ ಅಥವಾ ಕದ್ದ ಹಣದ 1.5ರಷ್ಟನ್ನು ವಸೂಲು ಮಾಡಿ ಹೆಚ್ಚಿನ ಅರ್ಧಭಾಗ ವನ್ನು ಸರ್ಕಾರಕ್ಕೆ ದಂಡವಾಗಿ ಜಮಾ ಮಾಡಲಾಗುತ್ತಿತ್ತು. ವೈಯುಕ್ತಿಕ ಜಗಳಗಳಿಗೆ ಸಂಬಂಧಿಸಿ ಲಿಂಗರಾಜನ ಹುಕುಂ ನಾಮೆ ಹೀಗೆ ಹೇಳಿದೆ : "ಅರಮನೆ ಸೀಮೆಯಲ್ಲಿ ಇರುವಂಥ ಯಾರಾದರೂ ಬೈದಾಡಿದ್ದುಂಟಾದರೆ ಆಯರಡು ಜನರನ್ನು ಕರೆಸಿ ವಿಚಾರಿಸಿ ಯಾವನು ಜಾಸ್ತಿಯಿಂದ ಬೈದು ಇದ್ದಾನೊ ಅವನಿಗೆ ಬೈಸಿಕೊಂಡವನಿಂದ ಒಂದಕ್ಕೆ ಎರಡರ ಮೇಲೆ ಬೈಸಿ ಬಿಗಿ ಮಾಡಿ ಬಿಡುವುದು. ಹೊಡೆದದ್ದುಂಟಾದರೆ ಒಂದಕ್ಕೆ ಎರಡರ ಮೇರೆ ಪೆಟ್ಟು ತಿಂದವನಿಂದ ಪೆಟ್ಟು ಹೊಡೆ ದವನಿಗೆ ಹೊಡಿಸಿ ಮುಂದೆ ಆ ಮೇರೆ ಮಾಡದಂತೆ ಬಿಗಿ ಮಾಡುವುದು". ಸಾರ್ವಜನಿಕ ಹಬ್ಬಗಳಿಗಾಗಲೀ, ಸಮಾ ರಂಭಗಳಿಗಾಗಲೀ ಗೈರು ಹಾಜರಾದವರಿಗೆ, ಹೆಚ್ಚಿನ ಶಿಕ್ಷೆ ವಿಧಿಸಲಾಗುತ್ತಿತ್ತು. ಯಾವುದೇ ಅಪರಾಧಿಯು ಊರ ತಕ್ಕನು ಕೊಟ್ಟ ತೀರ್ಪಿನ ಮೇಲೆ ನಾಡತಕ್ಕ ಅಥವಾ ದೇಶ ತಕ್ಕರಿಗೆ ಮೇಲ್ಮನವಿ ಮಾಡಲು ಅವಕಾಶವಿತ್ತು. ಗಡೀಪಾರು ಮಾಡುವುದು, ಕಠಿಣ ಶಿಕ್ಷೆಯಾಗಿತ್ತು. ರಾಜರಿಗೆ ಸಂಬಂಧ ಪಟ್ಟ, ಅಪರಾಧಗಳನ್ನು ರಾಜನು ತನ್ನ ದಿವಾನರ ಮಂಡಲ ದೊಂದಿಗೆ ಚರ್ಚಿಸಿ, ತೀರ್ಮಾನಿಸಿ, ಅಪರಾಧಗಳ ದಂಡ, ಗಲ್ಲು ಶಿಕ್ಷೆ ಅಥವಾ ಜೈಲುವಾಸ ಮೊದಲಾದ ಶಿಕ್ಷೆಗಳನ್ನು ಕೊಡುತ್ತಿದ್ದನು. ರಾಜರೇ ವಿಧಿಸುವ ಶಿಕ್ಷೆಗಳು ಉಗ್ರ ವಾಗಿದ್ದು ಅಂಗಾಂಗಗಳನ್ನು ಕತ್ತರಿಸುವ ಮುಂತಾದ ತೀವ್ರ ಸ್ವರೂಪವಾಗಿದ್ದವು. ತಕ್ಕರಿಗೆ ಹೆಚ್ಚಿನ ಗೌರವವನ್ನು ನೀಡು ತ್ತಿದ್ದರು. ಗ್ರಾಮ ಪಂಚಾಯತಿ ವಿಧಾನವು, ಪ್ರತೀ ಗ್ರಾಮ ದಲ್ಲಿಯೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಕೊಡಗಿನಲ್ಲಿಯೂ ಪ್ರತ್ಯೇಕ ಸಂಪ್ರದಾಯ ರೀತಿನೀತಿಗಳಿದ್ದ ಗ್ರಾಮಗಳಿದ್ದರೂ, ನ್ಯಾಯಾಡಳಿತದ ವಿಧಾನವೂ ಹೆಚ್ಚು ಕಡಿಮೆ ಒಂದೇ ರೀತಿ ಇದ್ದಿತು.

ಲಿಂಗರಾಜನ ಹುಕುಂನಾಮೆಗಳಲ್ಲಿ 20ನೇಯ ಅಪ್ಪಣೆ ಹೀಗಿದೆ : "ಯಾರಾದರೂ ಆಗಲಿ ಬಂದು ಊರು ಗವುಡಗೆ ನ್ಯಾಯ ಫಿರ್ಯಾದಿಗಳ ಹೇಳಿದಲ್ಲಿ ಅವರಿಗೆ ಬಹಳ ನಯದಿಂದ ವಿಂಗಡಕ್ಕೆ ಕರೆದು ವಿಚಾರಿಸಿ ತನ್ನಿಂದ ಆಗತಕ್ಕ ಕೆಲಸವಾದರೆ ಅವನಿಗೆ ಆಗುವುದು ಮಾಡಿಕೊಟ್ಟು ಅವನ ನ್ಯಾಯ ತೀರಿಸಿ ಅವರ ಮನೆಗೆ ಕಳುಹಿಸುವನು. ಇವನಿಂದ ತೀರತಕ್ಕ ನ್ಯಾಯವಲ್ಲದಿದ್ದರೆ ಅವನ ಮೇಲು ಅಧಿಕಾರಿಯಾಗಿರುವ ತಕ್ಕನ ಬಳಿಗೆ ಕಳುಹಿಸುವರು. ಅವನು ವಿಚಾರಿಸಿ ತನ್ನಿಂದ ತೀರತಕ್ಕದ್ದಲ್ಲದಿದ್ದರೆ ಆ ನಾಡು ಪಾರುಪತ್ಯಗಾರನ ಬಳಿಗೆ ಕಳುಹಿಸಿ....ಪಾರುಪಾತ್ಯಗಾರನು ತನ್ನಿಂದ ತೀರಿಸತಕ್ಕ ಕೆಲಸ ವಲ್ಲದಿದ್ದರೆ ದಿವಾನ್ ಕಚೇರಿದಾರರ ಬಳಿಗೆ" ಕಳುಹಿಸ ಬೇಕೆಂದಿತ್ತು. ಇದರಿಂದ ನ್ಯಾಯ ವ್ಯವಸ್ಥೆಯ ಶ್ರೇಣಿಗಳ ಕಲ್ಪನೆ ಬರುತ್ತದೆ. ನಾಡು ಸಮೃದ್ಧವಾಗಿದ್ದುದರಿಂದಲೂ ಯಾವ ರೀತಿಯ ಅಪರಾಧಗಳಿಗೂ ಎಡೆ ಇರಲಿಲ್ಲ. "ಜಾಣರಾಗಿ ಉತ್ತಮರಾದಂಥ ನಾಲ್ವರನ್ನು ಕರೆದು ಈ ನ್ಯಾಯ ತಂದ ಎರಡು ಜನರ ಕೂಡ ಬುದ್ಧಿವಂತ ನಾಲ್ಕು ಜನರಲ್ಲಿ ಎರಡು ಜನ ಒಬ್ಬನ ಪಕ್ಷ ಎರಡು ಜನ ಮತ್ತೊಬ್ಬನ ಪಕ್ಷವಾಗಿ ಕೂಡಿ ಕೊಂಡು ಅವರ (ವಾದಿ ಪ್ರತಿವಾದಿಗಳ) ಮಾತನ್ನು ಚೆನ್ನಾಗಿ ಕೇಳಿ ಗ್ರಹಿಸಿ" ಯಾರದು ಸತ್ಯ, ಯಾರದು ಅಸತ್ಯ ಎಂದು ನಿರ್ಣಯಿಸಬೇಕೆಂದು ಇದೇ ಅಪ್ಪಣೆಯಲ್ಲಿ ಪಂಚಾಯತಿದಾರ ರನ್ನು ಕರೆವ ವಿಚಾರದಲ್ಲಿ ಹೇಳಿದೆ. ಹೀಗೆ ಗ್ರಾಮ

ು

ಪಂಚಾಯಿತಿಯೂ ಯಾವ ರೀತಿಯ ಕಲಹಗಳಿಲ್ಲದಂತೆ ನೋಡು ತ್ತಿತ್ತು.

ಇಂಗ್ಲಿಷರ ಆಳ್ವಿಕೆಯಲ್ಲಿ ಮೊದಲಿಗೆ ಕೊಡಗಿನ ಸೂಪರಿಂಟೆಂಡೆಂಟ್‌ರವರು,ಮೈಸೂರಿನಲ್ಲಿದ್ದ ಜ್ಯುಡೀಷಿಯಲ್ ಕಮೀಷನರ್ ಅಧೀನದಲ್ಲಿದ್ದರು. ಮೈಸೂರಿನ ಜ್ಯುಡಿಷಿಯಲ್ ಕಮೀಷನರ್ ಕಚೇರಿಯು ಮೇಲ್ಮನವಿಗೆ ಉಚ್ಚ ನ್ಯಾಯಾಲಯವಾಗಿದ್ದಿತು. ನಂತರ ಅಷ್ಟಗ್ರಾಮದಲ್ಲಿನ ಕಮೀಷನರು ಕೊಡಗಿನ ಮಹಾದಂಡಾಧಿಕಾರಿಯಾಗಿ ನೇಮಿಸಲ್ಪಟ್ಟರು. ಕೊಡಗಿನ ಈ ಮಹಾದಂಡಾಧಿಕಾರಿಗಳು ಮಾಡಿದ ಮರಣದಂಡನೆಯ ಆಜ್ಞೆಗಳನ್ನು ಮೈಸೂರಿನ ಜ್ಯುಡಿಷಿಯಲ್ ಕಮೀಷನರ್‌ರಿಗೆ, ಅಂಕಿತಕ್ಕಾಗಿ ಕಳುಹಿಸಬೇಕಾಗಿದ್ದಿತು. ಯಾವುದೇ ಪ್ರಸಂಗದಲ್ಲೂ ಶಾರೀರಿಕ ದಂಡ ('ಕಾರ್ಪೊರಲ್ ಪನಿಶ್‌ಮೆಂಟ್', ಎಂದರೆ ಅಂಗಹೀನಗೊಳಿಸುವುದು ಇತ್ಯಾದಿ) ವಿಧಿಸುವುದನ್ನು 1834 ರಲ್ಲೇ ನಿಲ್ಲಿಸಲಾಯಿತು. ಜ್ಯುಡಿಷಿಯಲ್ ಕಮೀಷನರ್‌ರವರ ಕಚೇರಿಯು ಶ್ರೇಷ್ಠ ನ್ಯಾಯಾಲಯದಿಂದ 1856ರಲ್ಲಿ ನಿಯಮಿಸಲ್ಪಟ್ಟಿತ್ತು. ಕೊಡಗು ಸಂಸ್ಥಾನದಲ್ಲಿ ಪಾಲಿಸುತ್ತಿದ್ದ ಕೆಲವು ಸಂಹಿತೆಗಳು ಯಾವುವೆಂದರೆ ಸ್ಟ್ಯಾಂಪ್ ಆಕ್ಟ್ 1861, ಭಾರತೀಯ ದಂಡ ಸಂಹಿತೆ, ಭಾರತೀಯ ನೋಂದಣಿ ಅಧಿನಿಯಮ ಕೊಡಗು ನ್ಯಾಯಾಲಯಗಳ ಅಧಿನಿಯಮ 1868 ಮತ್ತು ಕ್ಯಾಟಲ್ ಟ್ರೆಸ್‌ಪಾಸ್ ಆ್ಯಕ್ಟ್. ಕ್ರಿಮಿನಲ್ ಪ್ರೊಸಿಜರ್ ಕೋಡನ್ನು ಅನುಷ್ಠಾನಕ್ಕೆ ತಂದ ಮೇಲೆ, ನ್ಯಾಯಾಂಗಗಳಲ್ಲಿ ಸ್ವಲ್ಪ ಬದಲಾವಣೆ ಅನಿವಾರ್ಯವಾಯಿತು. ಸೂಪರಿಂಟೆಂಡೆಂಟರ ನ್ಯಾಯಾಲಯವು ಸಿವಿಲ್ ವಿಷಯಗಳಲ್ಲಿ ರೂ. 3,000 ಗಿಂತಲೂ ಹೆಚ್ಚಿನ ಅಧಿಕಾರವನ್ನು ಹೊಂದಿತ್ತು. ಆಗಿನ ನ್ಯಾಯಾಡಳಿತದ ವ್ಯವಸ್ಥೆ ಈ ರೀತಿ ಇದ್ದಿತು.

| ಕೋರ್ಟುಗಳು | ಮೂಲದಾವೆ | | ಮೇಲ್ಮನವಿ | |
|---|---|---|---|---|
| | ಕ್ರಿಮಿನಲ್ | ಸಿವಿಲ್ | ಕ್ರಿಮಿನಲ್ | ಸಿವಿಲ್ |
| ಪಾರುಪತ್ತೆದಾರರ ಕೋರ್ಟು | 11 | 4 | — | — |
| ಸುಬೇದಾರರ ಕೋರ್ಟು | 8 | 8 | — | — |
| ಸಹಾಯಕ ಸೂಪರಿಂಟೆಂಡೆಂಟ್‌ರ ಕೋರ್ಟು | 2 | 2 | 2 | 2 |
| ಸೂಪರಿಂಟೆಂಡೆಂಟರ ಕೋರ್ಟು | 1 | 1 | 1 | 1 |
| ಸೆಷನ್ಸ್ ಕೋರ್ಟು | 1 | — | — | — |
| ಜ್ಯುಡಿಷಿಯಲ್ ಕಮೀಷನ್‌ರವರ ಕೋರ್ಟ್ | — | — | 1 | 1 |
| ಮೊತ್ತ | 23 | 15 | 4 | 4 |

1880 ರಲ್ಲಿ ಸಿವಿಲ್ ಕೋರ್ಟುಗಳಲ್ಲಿ ಆದ ಬದಲಾವಣೆ ಹೀಗಿದೆ : ಪಾರುಪತ್ತೆದಾರರ 5 ಕೋರ್ಟು (ಅಧಿಕಾರ ಮಿತಿ ರೂ. 50.00), ಸುಬೇದಾರರ 6 ಕೋರ್ಟು (ಮಿತಿ ರೂ. 100.00), ಮುನ್ಸಿಫರ 2 ಕೋರ್ಟು (ಮಿತಿ ರೂ. 1,000.00), ಎರಡನೇಯ ಸಹಾಯಕ ಕಮೀಷನರ್ 1 ಕೋರ್ಟು (ಮಿತಿ ರೂ. 1,000 – 3,000) ಹಾಗೂ ಒಂದನೇಯ ಸಹಾಯಕ ಕಮೀಷನರ್ 1 ಕೋರ್ಟು (ಜಿಲ್ಲಾ ನ್ಯಾಯಾಧಿಕಾರಿಗಳಿಂದ ವರ್ಗಾವಣೆಯಾದ ರೂ. 3,000 ವರೆಗಿನ ದಾವೆಗಳು). 1882ರಲ್ಲಿ, ಅಷ್ಟಗ್ರಾಮದ ಸೆಷನ್ಸ್ ನ್ಯಾಯಾಧೀಶರ ಹುದ್ದೆಯನ್ನು ರದ್ದುಪಡಿಸಿ ಕೊಡಗಿನ ಕಮೀಷನರ್‌ರವರಿಗೇ ಆ ಅಧಿಕಾರವನ್ನು ಕೊಡಲಾಯಿತು.

1834 ರಲ್ಲಿ ಬ್ರಿಟಿಷರು ಕೊಡಗಿನಲ್ಲಿ ನೆಲೆಸಿದಾಗ ಸರಕಾರವು ಹೊಸ ಇಲಾಖೆಗಳನ್ನು ಸ್ಥಾಪಿಸಬೇಕಾಗಿ ಬಂತು. ಇದಕ್ಕೆ ಮೊದಲು ಕಾರ್ಯ ನಿರ್ವಾಹಕ ಇಲಾಖೆಯೇ ನ್ಯಾಯ ಇಲಾಖೆಯಾಗಿತ್ತು. 1884 ರಲ್ಲಿ ನ್ಯಾಯ ಇಲಾಖೆಯನ್ನು ಪುನರ್ ರಚನೆ ಮಾಡಿದಾಗ ಕೊಡಗಿನ ಜ್ಯುಡಿಶಿಯಲ್ ಕಮೀಷನರ್ ಕೊಡಗು ಹಾಗೂ ಬೆಂಗಳೂರಿನ ಸಿವಿಲ್-ಮಿಲಿಟರಿ ಸ್ಟೇಷನ್ನಿಗೆ ಸಂಬಂಧಪಟ್ಟ ನ್ಯಾಯ ತೀರ್ಮಾನ ಮಾಡುತ್ತಿದ್ದರು. 1918-24ರ ವರೆಗೆ ಕೆಲವು ವೇಳೆ ಮೈಸೂರು ಹೈಕೋರ್ಟಿಗೂ ಮತ್ತೆ ಕೆಲವು ವೇಳೆ ಮದರಾಸು ಹೈಕೋರ್ಟಿಗೂ ಅಪೀಲುಗಳನ್ನು ವರ್ಗಾಯಿಸಲಾಗುತ್ತಿತ್ತು. ಪುನಃ 1925 ರಲ್ಲಿ ಚಿತ್ತೂರಿನ ಮುಖ್ಯ ನ್ಯಾಯಾಧೀಶರು

ಬೆಂಗಳೂರಿಗೆ ತಿಂಗಳಲ್ಲಿ 3 ದಿವಸ ಬಂದು ಕೊಡಗಿನ ಅಪೀಲ್ ಕೇಸುಗಳನ್ನು ತೀರ್ಮಾನ ಮಾಡುವಂತೆ ಆದೇಶಿಸಲಾಯಿತು. 1950ರ ವರೆಗೂ ಚಿತ್ತೂರಿನ ನ್ಯಾಯಾದೀಶರು ಕೊಡಗಿನ ಅಪೀಲು ಕೇಸನ್ನು ತೀರ್ಮಾನ ಮಾಡುವ ಪದ್ಧತಿ ಜಾರಿಯಲ್ಲಿ ಇದ್ದಿತು.

ಕೊಡಗಿನ ಕಮೀಷನರರು 1881 ರಿಂದ 1940ರ ವರೆಗೂ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಆಗಿದ್ದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೆಟರೂ ಆಗಿದ್ದರು. ಮಡಿಕೇರಿಯಲ್ಲಿ ಒಬ್ಬ ಸಬ್‌ಜಡ್ಜ್ ಮತ್ತು ಅವರ ಅಧೀನದಲ್ಲಿ ಒಬ್ಬ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಇದ್ದರು. ಕ್ರಿಮಿನಲ್ ಅಪೀಲುಗಳು ಸೆಷನ್ಸ್ ಜಡ್ಜ್‌ರವರಿಗೆ ಹೋಗುತ್ತಿತ್ತು. ಏಕೆಂದರೆ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟ್ ಸಹ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಆಗಿದ್ದರು. ವೀರರಾಜಪೇಟೆಯಲ್ಲಿ ಒಬ್ಬ ಮುನ್ಸೀಫರ ನ್ಯಾಯಾಲಯವೂ ಇತ್ತು. 1903 ರಲ್ಲಿ ಮಡಿಕೇರಿ ಮುನ್ಸೀಫರಿಗೆ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕೊಡಲಾಯಿತು. ವೀರರಾಜಪೇಟೆಯಲ್ಲಿ ಮೊದಲು ಮುನ್ಸೀಫ್ ಆಗಿದ್ದ ರಾಮಯ್ಯ ಪೂಂಜ ಎಂಬುವವರನ್ನು ಮಡಿಕೇರಿಯಲ್ಲಿ ಪ್ರಥಮ ಸಬ್‌ಜಡ್ಜ್ ಆಗಿ ನೇಮಿಸಲಾಯಿತು. 1925-35ರ ವರೆಗೆ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಹುದ್ದೆಯನ್ನು ತೆಗೆದುಹಾಕಲಾಗಿತ್ತು. 1932 ರಿಂದ 1941ರ ವರೆಗೆ ಈ ಸಂಸ್ಥಾನದಲ್ಲಿನ ಒಟ್ಟು ದಾವೆಗಳ ಸಂಖ್ಯೆ ಹೀಗಿದೆ : ಸಿವಿಲ್‌ದಾವೆ–16,709 (ದಾವೆಗಳಲ್ಲಿ ಒಳಪಟ್ಟ ಆಸ್ತಿಯ ಮೌಲ್ಯ ರೂ. 31·78 ಲಕ್ಷ). ಅಧೀನ ನ್ಯಾಯಾಧೀಶರ ನ್ಯಾಯಾಲಯದಲ್ಲಿನ ಕೆಲಸದ ಒತ್ತಡವು ಜುಡಿಶಿಯಲ್ ಕಮೀಷನರ್‌ರವರ ವ್ಯಾಖ್ಯಾನಕ್ಕೆ ಒಳಪಟ್ಟಿತ್ತು. 1939-40 ರಲ್ಲಿ ಕೊಡಗಿನ ಆಡಳಿತದಲ್ಲಿ ಕೆಲವು ಬದಲಾವಣೆಗಳು ಮಾಡಲ್ಪಟ್ಟಾಗ, ಆಗ ಕಮೀಷನರ್‌ರಾಗಿದ್ದ ಜೆ. ಡಬ್ಲ್ಯು. ಫ್ರಿಬರ್ಡ್‌ರವರು ಹೀಗೆ ಹೇಳಿದ್ದಾರೆ : ಮುಖ್ಯ ಕಮೀಷನರ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಕಾರ್‍ಯ ನಿರ್ವಹಿಸುವುದು ಕಷ್ಟ ಸಾಧ್ಯ ಮತ್ತು ಕಮೀಷನರ್‌ರಿಗೆ, ಸಿವಿಲ್ ನ್ಯಾಯಾಡಳಿತ ಬಗ್ಗೆ ಹೆಚ್ಚು ಮಾಹಿತಿ ಇರುವುದಿಲ್ಲ. ಈ ಹೇಳಿಕೆಯಿಂದಾಗಿ ಮುಂದೆ ನೂತನವಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಹುದ್ದೆಯನ್ನು ಸೃಷ್ಟಿಸಲಾಯಿತು. ಇದಲ್ಲದೆ ಅಸಿಸ್ಟಂಟ್ ಕಮೀಷನರ್, ಸುಬೇದಾರ ಮತ್ತು ಪಾರುಪತ್ತೆಗಾರರ ನ್ಯಾಯಾಲಯಗಳನ್ನು ತೆಗೆದು ಹಾಕಲಾಯಿತು. 1941ರಲ್ಲಿ ಸಿವಿಲ್, ಕ್ರಿಮಿನಲ್ ಮತ್ತು ಕಂದಾಯ ಇಲಾಖೆ ನ್ಯಾಯಾಲಯಗಳ ಸಂಖ್ಯೆ ಈ ರೀತಿ ಇದ್ದವು : ಸಿವಿಲ್ : ಜಿಲ್ಲಾ ನ್ಯಾಯಾಧೀಶರು–1, ಮುನ್ಸೀಫರು–2, ಕ್ರಿಮಿನಲ್ : ಸೆಷನ್ಸ್ ನ್ಯಾಯಾಧೀಶ–1, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್-1, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್–2, ಎರಡನೇಯ ದರ್ಜೆ ಮ್ಯಾಜಿಸ್ಟ್ರೇಟರು ಮತ್ತು ಬೆಂಚ್ ಮ್ಯಾಜಿಸ್ಟ್ರೇಟರು-9. ರೆವಿನ್ಯೂ-ಮುಖ್ಯ ಕಮೀಷನರ್-1, ಸಹಾಯಕ ಕಮೀಷನರ್–1 ಮತ್ತು ಸುಬೇದಾರರು-2. ಇದಲ್ಲದೆ – ಐದು ಹಂಗಾಮಿ ನ್ಯಾಯಾಧೀಶರ ನ್ಯಾಯಾಲಯಗಳೂ, 7 ಗೌರವ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳೂ ಇದ್ದವು. ಸಹಾಯಕ ಕಮೀಷನರ್‌ರವರು (ಕಮೀಷನರ್ ಹುದ್ದೆ ರದ್ದಾದ ಮೇಲೆ) ಕೊಡಗು ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಕಾರ್ಯ ನಿರ್ವಹಿಸುತ್ತಿದ್ದರು. 1925 ರಿಂದ ಚಿತ್ತೂರಿನ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಕೊಡಗು ಕೋರ್ಟ್ ರೆಗ್ಯುಲೇಶನ್ ಆ್ಯಕ್ಟ್ (1901)ನ ಪರಿಮಿತಿಯಲ್ಲಿ ಕೊಡಗಿನ ಜುಡಿಶಿಯಲ್ ಕಮೀಷನರ್ ಆಗಿದ್ದರು. ಈ ನಿಯಮಾವಳಿಯನ್ನು ದಿ ಇಂಡಿಯಾ ಆ್ಯಕ್ಟ್ (1935)ನ ಅನುಭಂಧ 230 (1)ರಂತೆ ಬದಲಾಯಿಸಲಾಯಿತು. ಸ್ವಾತಂತ್ರ್ಯನಂತರ ಕೊಡಗಿನ ಜುಡಿಶಿಯಲ್ ಕಮೀಷನರ್‌ರವರ ಹುದ್ದೆಯನ್ನು ತೆಗೆದು ಹಾಕಲಾಯಿತು. ಇದರ ಹಿನ್ನೆಲೆಯಲ್ಲಿ 1946ರಲ್ಲಿ ಕೊಡಗಿನ ವಿಧಾನಸಭೆಯು ಮದರಾಸಿನ ಉಚ್ಚ ನ್ಯಾಯಾಲಯವನ್ನೇ ಕೊಡಗಿನ ಉಚ್ಚ ನ್ಯಾಯಾಲಯವನ್ನಾಗಿ ಪರಿಗಣಿಸಬೇಕೆಂದು ನಿರ್ಣಯ ಮಾಡಿದರು. ಕೊಡಗಿನ ಜಿಲ್ಲಾ ನ್ಯಾಯಾಧೀಶರನ್ನು, ಉಚ್ಚ ನ್ಯಾಯಾಲಯದ ಪರವಾನಗಿ ಪಡೆದು, ಮುಖ್ಯ ಜ್ಯುಡೀಶಿಯಲ್ ಕಮೀಷನರ್ ಆಗಿ ನೇಮಿಸಲಾಯಿತು.

ಮೊದಲಿಗೆ, ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟ್‌ರು ಕೊಡಗು ಮತ್ತು ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರೀ ಸ್ಟೇಷನ್ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಕೊಡಗಿನ ನ್ಯಾಯಾಲಯಗಳಿಂದ ಮೇಲ್ಮನವಿಗಳನ್ನು ರೆಸಿಡೆಂಟರಿಗೆ ಕಳುಹಿಸುತ್ತಿದ್ದರು. ಈ ರೆಸಿಡೆಂಟ್‌ರಿಗೆ ಅವರ ನ್ಯಾಯ ತೀರ್ಮಾನದ ಕಾರ್ಯದಲ್ಲಿ ಸಹಾಯ ಮಾಡಲು ಮದರಾಸಿನಿಂದ ಹಿರಿಯ ಜಿಲ್ಲಾ ನ್ಯಾಯಾಧೀಶರನ್ನು ನಿಯೋಜಿಸಲಾಗಿತ್ತು. 1947ರ ವರೆಗೂ ಈ ವ್ಯವಸ್ಥೆ ಕಾರ್ಯಾಚರಣೆಯಲ್ಲಿತ್ತು. ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಇಡೀ ಕೊಡಗು ಸಂಸ್ಥಾನದ ಮೇಲೆ ಇದ್ದು ಸಂಸ್ಥಾನದ ಪ್ರಮುಖ ಸಿವಿಲ್ ನ್ಯಾಯಾಲಯದ ಜವಾಬ್ದಾರಿಯನ್ನು ಅದು ಹೊಂದಿತ್ತು. 1945 ರಿಂದ 1949ರ ವರೆಗೆ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಾದ ದಾವೆಗಳ ವಿವರ ಹೀಗಿದೆ.

| | 1945 | 1946 | 1947 | 1948 | 1949 |
|---|---|---|---|---|---|
| ಪ್ರಥಮ ಸಿವಿಲ್ ದಾವೆ | 7 | 6 | 7 | 7 | 17 |
| ಸಿವಿಲ್ ಮೇಲ್ಮನವಿ | 25 | 28 | 13 | 24 | 45 |
| ಸೆಷನ್ಸ್ ದಾವೆ | 6 | 7 | 3 | 7 | 9 |
| ಕ್ರಿಮಿನಲ್ ಮೇಲ್ಮನವಿ | 5 | 6 | 8 | 12 | 19 |

ಇವುಗಳಲ್ಲದೆ ಇತರೆ ಹಾಗೂ ಪುನರ್ ಪರಿಶೀಲನಾ ಅರ್ಜಿಗಳನ್ನು ಈ ನ್ಯಾಯಾಲಯ ಪರಿಶೀಲಿಸುತ್ತಿತ್ತು. ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ದಾವೆಗಳ ಸಂಖ್ಯೆ ಹೆಚ್ಚಾದ್ದರಿಂದ ಒಬ್ಬ ವಿಶೇಷ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರನ್ನು 1951ರಲ್ಲಿ ನೇಮಿಸಲಾಯಿತು. ನಂತರದ 2 ವರ್ಷಗಳಲ್ಲಿ ಸುಮಾರು 2,500 ದಾವೆಗಳು ಈ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾಖಲಾಗಿದ್ದವು. ಆದರೆ ನ್ಯಾಯಾಲಯವನ್ನು 1953ರಲ್ಲಿ ರದ್ದುಪಡಿಸಲಾಯಿತು. 1952ರಲ್ಲಿ ಮದರಾಸಿನ ಉಚ್ಚ ನ್ಯಾಯಾಲಯ ವೀರರಾಜಪೇಟೆ ಮುನ್ಸೀಫ್ ಕೋರ್ಟ್‌ನ ಒಂದು ಕ್ರಿಮಿನಲ್ ದಾವೆಯನ್ನು ಮಂಗಳೂರಿನ, ಹೆಚ್ಚುವರಿ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ವರ್ಗಾಯಿಸಿತು. ಈ ಬಗೆಯ ವರ್ಗಾವಣೆ ಕೊಡಗು ಪ್ರಾಂತ್ಯದಲ್ಲಿ ಇದೇ ಮೊದಲು. ಈ ದಾವೆಯಲ್ಲಿ, ಅಪರಾಧಿಯು 1952 ಜನವರಿಯಲ್ಲಿ ಒಂದು ಚುನಾವಣಾ ಸಭೆಯಲ್ಲಿ ಗಲಭೆ ಮಾಡಿದ ಕಾರಣ ಐ.ಪಿ.ಸಿ. 147ನೇ ಸೆಕ್ಷನ್ ಹಾಗೂ ಜನತಾ ಪ್ರಾತಿನಿಧ್ಯ ಅಧಿನಿಯಮದ 127ನೇ ಪ್ರಕರಣಗಳ ಪ್ರಕಾರ ದಾವೆ ಮಾಡಲಾಗಿತ್ತು. ಈ ದಿಸೆಯಲ್ಲಿ ಆಗಿನ ನ್ಯಾಯಾಧೀಶರು ಹೀಗೆ ಹೇಳಿದ್ದರು. 'ಕೊಡಗಿನಂತಹ ಸಂಸ್ಥಾನದಲ್ಲಿ, ನ್ಯಾಯಾಂಗ ಹಾಗೂ ಕಾರ್ಯಾಂಗ ಬೇರೆಯಾಗಿಲ್ಲದಿರುವ ಕಾರಣ ಅಪರಾಧಿಗೆ, ಪಕ್ಷಪಾತವಿಲ್ಲದ, ನ್ಯಾಯವಾದ ವಿಚಾರಣೆ ಆಗುವುದರ ಬಗ್ಗೆ ಸಂದೇಹಕ್ಕೆ ಆಸ್ಪದವಿದೆ" ಆದರೂ 1953ರಲ್ಲಿ ಈ ದಾವೆಯನ್ನು ಸರ್ಕಾರ ವಾಪಸ್ಸು ಪಡೆಯಿತು.

**ಕಮೀಷನರ್ ಕೋರ್ಟು**

ಕಮೀಷನರ್ ಮಾಡಿದ ತೀರ್ಪಿನ ಮೇಲೆ ಮೇಲ್ಮನವಿಗಳನ್ನು ಮುಖ್ಯ ಕಮೀಷನರು ವಿಚಾರಣೆ ಮಾಡುತ್ತಿದ್ದರು. ಕ್ರಿಮಿನಲ್ ಅಪರಾಧಗಳ ತೀರ್ಮಾನವನ್ನು ಈ ಕೆಳಕಂಡ ನ್ಯಾಯಾಧೀಶರು ಮಾಡುತ್ತಿದ್ದರು :

| ನ್ಯಾಯಾಲಯ | ಮುಖ್ಯಸ್ಥರು | ಸಂಖ್ಯೆ |
|---|---|---|
| ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ | ಕಮೀಷನರ್ | 1 |
| ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ (ಇವರು ಮ್ಯಾಜಿಸ್ಟ್ರೇಟರಾಗಿಯೂ ಅಧಿಕಾರ ಹೊಂದಿದ್ದರು) | ಸಹಾಯಕ ಕಮೀಷನರ್ | 1 |
| ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ | 2ನೇ ಸಹಾಯಕ ಕಮೀಷನರ್ | 1 |
| ಸೆಕೆಂಡ್‌ಕ್ಲಾಸ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ | ಮುನ್ಸಿಫರು | 2 |
| | ಸುಬೇದಾರರು | 6 |
| ಥರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ | ಪಾರುಪತ್ತೆಗಾರು | 10 |

ಆಗಿನ ದಿನಗಳಲ್ಲಿ ಕೊಡುತ್ತಿದ್ದ ಶಿಕ್ಷೆಗಳೆಂದರೆ – ಜುಲ್ಮಾನೆ, ಚಾಟಿ ಏಟು, ಜೈಲುವಾಸ, ಮರಣದಂಡನೆ ಮತ್ತು ಗಡೀಪಾರು. 1868ರ ಹೊತ್ತಿಗೆ ಒಂದು ಮರಣ ದಂಡನೆ ಶಿಕ್ಷೆಯನ್ನು ವಿಧಿಸಲಾಗಿತ್ತು. 1886 ರಿಂದ 88ರ ವರೆಗೆ ಏಳು ಮಂದಿಯನ್ನು ಗಡೀಪಾರು ಮಾಡಲಾಗಿತ್ತು. ಆಡಳಿತ ಬಿಗಿಯಾದಂತೆ ಅಪರಾಧಗಳ ನೋಂದಣಿ ಹಾಗೂ ಮೊಕದ್ದಮೆಗಳು ಹೆಚ್ಚಿದವು.

ಜ್ಯುಡಿಷಿಯಲ್ ಕಮೀಷನರ್ ಅಧಿಕಾರಗಳನ್ನು ತನ್ನ ಸ್ಥಾನ ನಿಮಿತ್ತದಿಂದ ಹೊಂದಿದ್ದ, ಮುಖ್ಯ ಕಮೀಷನರು ಮೇಲ್ಮನವಿ ಅಧಿಕಾರಿಯಾಗಿದ್ದು, ಮರಣದಂಡನೆ ನೀಡಬಹುದಾದ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಮೂಲ ಅಧಿಕಾರವನ್ನೂ ಅಸಿಸ್ಟಂಟ್ ಕಮೀಷನರ್ ಮತ್ತು ಇತರ ನ್ಯಾಯಾಧೀಶರು ನೀಡಿದ ತೀರ್ಪುಗಳಿಗೆ ಮೇಲ್ಮನವಿ ಪ್ರಾಧಿಕಾರ ಅಧಿಕಾರವನ್ನು ಹೊಂದಿದ್ದರು. ಆಂಗ್ಲ ಅಸಿಸ್ಟೆಂಟ್ ಕಮೀಷನರು ಜಿಲ್ಲೆ ಮ್ಯಾಜಿಸ್ಟ್ರೇಟ್‌ರಾಗಿದ್ದುದರಿಂದ, ಮರಣದಂಡನೆ ನೀಡಬಹುದಾದ ಅಧಿಕಾರವನ್ನೂ ಮತ್ತು ಕೆಳಗಿನ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳ ಮೇಲೆ ಆಡಳಿತದ ಅಧಿಕಾರವನ್ನು ಹೊಂದಿದ್ದರು. ಈ ನ್ಯಾಯಾಲಯಗಳು ಯಾವುವೆಂದರೆ : (1) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಮತ್ತು ಸಬ್ ಜಡ್ಜ್‌ರವರ ನ್ಯಾಯಲಯ ಒಂದು, (2) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಮತ್ತು ಸಹಾಯಕ ಕಮೀಷನರ್ ನ್ಯಾಯಾಲಯ ಒಂದು ಹಾಗೂ (3) ಎರಡನೇಯ ದರ್ಜೆ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯಗಳು 7. ಈ ನ್ಯಾಯಾಲಯಗಳು ಖಜಾನೆಯ ಆಡಳಿತವನ್ನು ನಿರ್ವಹಿಸುತ್ತಿದ್ದು ನ್ಯಾಯಾಧೀಶರು ಖಜಾನೆಯ ಅಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

1935ರಲ್ಲಿ ಕೊಡಗು ವಿಧಾನ ಪರಿಷತ್ತಿನಲ್ಲಿ, ನ್ಯಾಯಾಂಗ ಮತ್ತು ಕಾರ್ಯಾಂಗವನ್ನು ಪ್ರತ್ಯೇಕಿಸಬೇಕೆಂದು ನಿರ್ಣಯ ಮಾಡಲಾಯಿತು. ಆಗ ಪರಿಷತ್ತಿನಲ್ಲಿ ಹಣಕಾಸು ಮಂಡಳಿ ಸದಸ್ಯರೊಬ್ಬರು ಕೊಡಗಿನಲ್ಲಿನ ವ್ಯಾಜ್ಯಗಳ ಬಗ್ಗೆ ಹೀಗೆ ಹೇಳಿದ್ದಾರೆ. "ನಮ್ಮ ಪ್ರಾಂತ್ಯವು ಸಿವಿಲ್ ಅಥವಾ ಕ್ರಿಮಿನಲ್ ದಾವೆಗಳಿಂದಾಗಲೀ, ಪ್ರಸಿದ್ಧವಾಗಿಲ್ಲ. ಇಲ್ಲಿರುವ ವಿಚಿತ್ರ ಭೂಗೇಣಿ ಪದ್ಧತಿ ವ್ಯಾಜ್ಯಗಳಿಗೆ ಎಡೆ ಮಾಡಿಲ್ಲ. ಯಾವ ಸಿವಿಲ್ ವ್ಯಾಜ್ಯಗಳು ಹೆಚ್ಚಿನ ಮೊತ್ತದ್ದಲ್ಲ. ಮತ್ತು ಮದರಾಸಿನ ಉಚ್ಚ ನ್ಯಾಯಾಲಯದವರೆಗೂ ಹೋಗಬೇಕಾದಷ್ಟು ಹಣ ವ್ಯಯ ಮಾಡುವಂತಹುದೂ ಅಲ್ಲ".

1959ರಲ್ಲಿ ನ್ಯಾಯಾಡಳಿತದಲ್ಲಿ ಬದಲಾವಣೆಗಳನ್ನು ಮಾಡಿ ಕೊಡಗಿಗೆ ಒಬ್ಬ ಜಿಲ್ಲಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡಲಾಯಿತು. ಇದಲ್ಲದೆ ಮಡಿಕೇರಿ ಹಾಗೂ ವೀರರಾಜಪೇಟೆಯಲ್ಲಿ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡಲಾಯಿತು. ಕಂದಾಯ ಅಧಿಕಾರಿಗಳು ಎಕ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟರು ಜಿಲ್ಲೆಯಲ್ಲಿ ನ್ಯಾಯಾಡಳಿತದ ಪ್ರಮುಖ ಅಧಿಕಾರಿಯಾಗಿದ್ದು ಇತರ ಎಲ್ಲಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ಮೇಲೆ ನಿಯಂತ್ರಣ ಹೊಂದಿದ್ದರು.

ಪ್ರಸ್ತುತ ಕ್ರಿಮಿನಲ್ ಕೋರ್ಟುಗಳಲ್ಲಿ ಸೆಷನ್ಸ್ ಕೋರ್ಟು ಪ್ರಮುಖ ನ್ಯಾಯಾಲಯವಾಗಿದೆ. ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರಿಂದ, ವರ್ಗಾಯಿಸಲ್ಪಟ್ಟ ದಾವೆಗಳನ್ನು ವಿಚಾರಣೆಯ ನಂತರ ಸೆಷನ್ಸ್‌ಜಡ್ಜರು ಅಂಗೀಕರಿಸುವರು. ಈ ಜಿಲ್ಲೆಯಲ್ಲಿ ಅಧಿಕ ಸೆಷನ್ಸ್ ಜಡ್ಜರ ನ್ಯಾಯಾಲಯ ಇಲ್ಲ. 1961ರಲ್ಲಿ 23 ದಾವೆಗಳು ಸೆಷನ್ಸ್ ಕೋರ್ಟಿಗೆ ದಾಖಲಾಗಿದ್ದು, 14 ದಾವೆಗಳನ್ನು ತೀರ್ಮಾನಿಸಲಾಯಿತು.

ಪ್ರಸ್ತುತ (1992) ಈ ಜಿಲ್ಲೆಯಲ್ಲಿರುವ ನ್ಯಾಯಾಲಯಗಳೆಂದರೆ, 1) ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ; 2) ಚೀಫ್ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ ; 3) ಪ್ರಿನ್ಸಿಪಲ್ ಮುನ್ಸೀಫ (ಜೆ.ಎಂ.ಎಫ್.ಸಿ)ರ ನ್ಯಾಯಾಲಯ ; ಮತ್ತು ಅಡಿಶನಲ್ ಮುನ್ಸೀಫರ ನ್ಯಾಯಾಲಯ (ಜೆ.ಎಂ.ಎಫ್.ಸಿ.) (ಇವೆಲ್ಲ ಮಡಿಕೇರಿಯಲ್ಲಿ) ; 4) ಮುನ್ಸೀಫರ ನ್ಯಾಯಾಲಯ (ಜೆ.ಎಂ.ಎಫ್.ಸಿ.) ಸೋಮವಾರಪೇಟೆ ; 5) ಪ್ರಿನ್ಸಿಪಾಲ್ ಮುನ್ಸೀಫರ ನ್ಯಾಯಾಲಯ (ಜೆ.ಎಂ.ಎಫ್.ಸಿ.) ವೀರರಾಜಪೇಟೆ; ಮತ್ತು 6) ಅಡಿಶನಲ್ ಮುನ್ಸೀಫರ ನ್ಯಾಯಾಲಯ, (ಜೆ.ಎಂ.ಎಫ್.ಸಿ.), ವೀರರಾಜಪೇಟೆ.

## ಶಾಸನ ಸುವ್ಯವಸ್ಥೆಯ ಸ್ಥಿತಿ

ಈ ಜಿಲ್ಲೆಯು ಕೇರಳ ರಾಜ್ಯದ ಗಡಿಯಲ್ಲಿರುವುದರಿಂದಲೂ ಆರಣ್ಯ ಸಂಪತ್ತು ಅತಿ ಹೆಚ್ಚು ಇರುವುದರಿಂದಲೂ, ಅಲ್ಲಿನ ಜನ ಇಲ್ಲಿಗೆ ವಲಸೆ ಬರುವುದು ಅತಿ ಹಿಂದಿನ ಕಾಲದಿಂದಲೂ ಇದೆ. ಕೆಲಸಗಾರರಾಗಿ ವಲಸೆಬಂದ ಕೇರಳೀಯರು ಕ್ರಮೇಣ ಕಾಡುಗಳಲ್ಲಿ ಮರ ಕಡಿಯುವುದನ್ನು ಆರಂಭಿಸಿದರು. ಸ್ಥಳೀಯರು ಪವಿತ್ರವೆಂದು ಭಾವಿಸಿರುವ 'ದೇವರಕಾಡು'ಗಳಿಗೆ ಹೊರಗಿನಿಂದ ಬಂದವರು ಕೈ ಹೆಚ್ಚಿದಾಗ ವೈಮನಸ್ಸು, ಜಗಳಗಳು ಪ್ರಾರಂಭವಾದವು. ವಲಸೆ ಬಂದ ಕೇರಳೀಯರ ಜನಸಂಖ್ಯೆ ಕ್ರಮೇಣ ಸ್ಥಳೀಯ ಕೊಡವರಿಗಿಂತಲೂ ಹೆಚ್ಚಾಗಲು, ಗಲಭೆಗಳು ಪ್ರಾರಂಭವಾದವು. ಕೊಡಗು ದಟ್ಟವಾದ ಆರಣ್ಯ ಪ್ರದೇಶವಾದ್ದರಿಂದ ಆರಣ್ಯ ಸಂಪತ್ತಿನ ಕಳ್ಳ ಸಾಗಾಣಿಕೆಯೂ ಹೆಚ್ಚಾಯಿತು. ಈ ಅಕ್ರಮ ಸಾಗಾಣಿಕೆಗೆ ಪರಪ್ರಾಂತದವರೇ ಕಾರಣ ಎಂಬುದು ಸ್ಥಳೀಯರ ಆಪಾದನೆ. ಈ ಎಲ್ಲ ಕಾರಣಗಳಿಂದ 1987 ರಲ್ಲಿ ಕೊಡಗು ಮೂಲ ನಿವಾಸಿಗಳ ಸಂಘ ಎಂಬ ಸಂಘವನ್ನು ಸ್ಥಳೀಯರು ಪ್ರಾರಂಭಿಸಿ, ಕೊಡವರ ಪ್ರತ್ಯೇಕತೆಯನ್ನು ಉಳಿಸಬೇಕೆಂದು ಹೋರಾಟ ಆರಂಭಿಸಿದರು. "ದೇವರಕಾಡು"ನ್ನು ಅತಿಕ್ರಮ ಸಾಗುವಳಿ ಮಾಡುವುದರ ವಿರುದ್ಧವೂ 'ಜನಜಾಗೃತಿ' ಎಂಬ

ವೇದಿಕೆಯ ಮೂಲಕ ಕೂಗೆದ್ದಿತು. 1982 ರಲ್ಲಿ ವೀರರಾಜಪೇಟೆಯಲ್ಲಿ ಘರ್ಷಣೆಗಾಗಿ ಕೆಲವು ಅಂಗಡಿಗಳನ್ನು ಸುಟ್ಟು ಹಾಕಿದರು. 1981 ರಿಂದ ಈ ಜಿಲ್ಲೆಗಳಲ್ಲಿ ನಡೆದ ಕೆಲವು ಗಲಭೆಗಳನ್ನು ಇಲ್ಲಿ ಕೊಡಲಾಗಿದೆ.

1983ರಲ್ಲಿ ಮೂರ್ನಾಡಿನಲ್ಲಿ ಒಬ್ಬ ಸ್ಥಳೀಯನ ವಿವಾಹ ಸಂದರ್ಭದಲ್ಲಿ, ಕೆಲವರು ಒಂದು ಅಂಗಡಿಗೆ ಹೋಗಿ ಗಲಭೆ ಮಾಡಿದರೆಂದೂ ಆತನ ಹೋಟೆಲ್‌ನ ಮೇಲೆ ಕಲ್ಲು ತೂರಿದರೆಂದೂ ವರದಿಯಾಗಿದೆ. 1984 ರಲ್ಲಿ ಸಿದ್ದಾಪುರದಲ್ಲಿ ಒಂದೇ ಗುಂಪಿನ ಆರು ಮಂದಿ ಒಟ್ಟಿಗೆ ಸೇರಿ, ಬೇರೆ ಜಾತಿಯ ಒಬ್ಬನನ್ನು ಹಿಂಸಿಸಿದರು. 1985 ರಲ್ಲಿ ಜನವರಿಯಲ್ಲಿ, ಧನಗಾಲಿನಲ್ಲಿ ನಾಲ್ಕು ಮಂದಿ ಒಂದು ಪೂಜಾ ಸ್ಥಾನಕ್ಕೆ ಅಕ್ರಮ ಪ್ರವೇಶಮಾಡಿ ಅಲ್ಲಿದ್ದ ಒಬ್ಬನನ್ನು ಥಳಿಸಿದರು. ಇನ್ನೊಮ್ಮೆ ಅಕ್ಟೋಬರ್ ಮಾಸದಲ್ಲಿ ಒಬ್ಬ ವ್ಯಕ್ತಿಗೆ ಇನ್ನೊಂದು ಜಾತಿಯವರು ಹೊಡೆದು ಅವನಲ್ಲಿದ್ದ ಹಣ ಮತ್ತು ಚಿನ್ನದ ಸರಗಳನ್ನು ಅಪಹರಿಸಿದರು. ಜನವರಿಯಲ್ಲಿ, ಒಂದು ವಿದ್ಯಾರ್ಥಿನಿಯರ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯು ಒಬ್ಬ ಅನ್ಯಜಾತಿಯ ಕನ್ಯೆಯನ್ನು ಛೇಡಿಸಿದನೆಂದು ಗಲಭೆಯಾಗಿತ್ತು. 1986 ಮಾರ್ಚ್ ಮಾಹೆಯಲ್ಲಿ, ಇಬ್ಬರು ಯುವಕರು ಬೇರೆ ಜಾತಿಯ ಯುವತಿಯನ್ನು ಛೇಡಿಸಿದರೆಂದು, ಗಲಭೆಯಾಗಿ ಆ ಯುವಕರ ಜಾತಿಯವರ ಕೆಲವು ಅಂಗಡಿಗಳನ್ನು ಲೂಟಿಮಾಡಿದರು. ಹೀಗೆ ಇನ್ನೂ ಅನೇಕ ಮತೀಯ ಗಲಭೆಗಳು ನಡೆದವು. 1987 ರಲ್ಲಿ 3, 1988 6, 1989-90 ರಲ್ಲಿ ಸುಮಾರು 10-15 ಮತೀಯ ಹಾಗೂ ಚುನಾವಣೆಗಳಿಗೆ ಸಂಬಂಧಪಟ್ಟ ಗಲಭೆಗಳಾಗಿದ್ದವು.

ಈ ಜಿಲ್ಲೆಯಲ್ಲಿ ಸುಮಾರು 2,900 ತೋಟಗಳಿದ್ದು ಕಾರ್ಮಿಕರ ಸಂಖ್ಯೆ ಸುಮಾರು 1,16,000 ಇದೆ. ಈ ಕೆಳಕಂಡ ಮುಖ್ಯ ಕಾರ್ಮಿಕ ಸಂಘಗಳು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿವೆ. 1) ಕೊಡಗು ಜಿಲ್ಲಾ ಪ್ಲಾಂಟೇಶನ್ ಮತ್ತು ಜನರಲ್ ಲೇಬರ್ ಯೂನಿಯನ್ (ಎ.ಐ.ಟಿ.ಯು.ಸಿ.), 2) ಜನರಲ್ ಎಂಪ್ಲಾಯೀಸ್ ಯೂನಿಯನ್, ಸುಂಟಿಕೊಪ್ಪ (ಐ.ಎನ್.ಟಿ.ಯು.ಸಿ.), 3) ಕರ್ನಾಟಕ ಪ್ಲಾಂಟೇಶನ್ ಮತ್ತು ಜನರಲ್ ಲೇಬರ್ ಟ್ರೇಡ್ ಯೂನಿಯನ್, ಚೆಟ್ಟಳ್ಳಿ, 4) ಎಸ್ಟೇಟ್ ವರ್ಕರ್ಸ್ ಯೂನಿಯನ್ಸ್, ಕೊಡಗು ಜಿಲ್ಲೆ (ಸಿ.ಐ.ಟಿ.ಯು. ಅಲ್ಲದೆ ಸಿ.ಪಿ.ಐ.ಎಂ.), 5) ಕರ್ನಾಟಕ ರಾಜ್ಯ ಜನರಲ್ ವರ್ಕರ್ಸ್ ಅಸೋಸಿಯೇಶನ್, ಸಿದ್ದಾಪುರ.

1981–90ರ ವರೆಗೆ ನಡೆದ ಕೆಲವು ಕಾರ್ಮಿಕ ಗಲಭೆಗಳು ಈ ರೀತಿ ಇವೆ : 1981–ಮುತ್ತಿಕಾಡು ಎಸ್ಟೇಟ್ ಸುಂಟಿಕೊಪ್ಪದಲ್ಲಿ ಮೂರು ಕೆಲಸಗಾರರನ್ನು ವಜಾ ಮಾಡಿದ ಕಾರಣ, ಕೆಲಸಗಾರರು ಉಪವಾಸ ಸತ್ಯಾಗ್ರಹ ಮಾಡಿದ್ದರು. 1982–ನೂಕಟ್ಟಿದ ರಬ್ಬರ್ ಎಸ್ಟೇಟಿನ ಕೆಲಸಗಾರರು 'ಸರ್ಕಾರಿ ನಿಗದಿ ಮಾಡಿದ ಸಂಬಳ ಕೊಡಿ' ಎಂದು ಕೂಗುತ್ತಾ ಪ್ರದರ್ಶನ ನಡೆಸಿದ್ದರು. 1983–ನೂಕಟ್ಟಿದ ಸಣ್ಣ ರಬ್ಬರ್ ಎಸ್ಟೇಟಿನಲ್ಲಿ 13 ಜನ ಕೆಲಸಗಾರರನ್ನು ತೆಗೆದು ಹಾಕಿದ್ದಾರೆಂದು ಅಲ್ಲಿ ಸಂಪು ಹೂಡಿದ್ದರು. 1983–ಗ್ಲೆನ್‌ರೋಲನ್ ಟೀ ಎಸ್ಟೇಟಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವೆಂದು ಕೆಲಸಗಾರರು ಧರಣಿ ಹೂಡಿದ್ದರು. ಹುದಿಕೇರಿ ಟೀ ಎಸ್ಟೇಟ್ ಕೆಲಸಗಾರರು, ತಮ್ಮ ಕೆಲಸದ ವೇಳೆಯನ್ನು ಬದಲಾಯಿಸಿದ್ದರಿಂದ ಧರಣಿ ಹೂಡಿದ್ದರು. ರೂಬೀ ಎಸ್ಟೇಟು, ಗ್ಲೆನ್‌ರೋಲನ್ ಎಸ್ಟೇಟು, ಹೂವಿನ ಕಾಡು ಎಸ್ಟೇಟುಗಳಲ್ಲಿಯೂ, ಕೆಲಸಗಾರರ ಕೆಲವು ಬೇಡಿಕೆಗಳ ಕಾರಣ ಗಲಭೆಗಳಾಗಿದ್ದವು. 1985–ಪೊನ್ನಿಬೆಟ್ಟದ ವರದನ್ ಕಾಫಿ ಎಸ್ಟೇಟಿನ ಕೆಲಸಗಾರರು, ಕೊಡಿಗೆ ಕಾಫಿ ಎಸ್ಟೇಟಿನ ಕೆಲಸಗಾರರು, ಸಂಪು ಹೂಡಿದ್ದರು. ಚೆಟ್ಟಳ್ಳಿ ತೋಟಗಾರಿಕಾ ಸಂಶೋಧನಾ ಕೇಂದ್ರದ ಕೆಲಸಗಾರರು, ಮೂರು ಕೆಲಸಗಾರರನ್ನು ಅಮಾನತ್ತಿನಲ್ಲಿಟ್ಟ ಕಾರಣ ಸಂಪು ಹೂಡಿದ್ದರು. ಜೇನುಕೊಲ್ಲಿ ಕಾಫಿ ಎಸ್ಟೇಟ್ (ಕತ್ತಲೆಕಾಡು) ಇಲ್ಲಿ ಕೆಲಸಗಾರರು ಬೋನಸ್ ಕೊಡಬೇಕೆಂದೂ ಮತ್ತು ಕೆಲವು ಕೆಲಸಗಾರರಿಗೆ, ಪುನಃ ನೌಕರಿ ಕೊಡಬೇಕೆಂದೂ ಧರಣಿ ಹೂಡಿದ್ದರು. 1985 ರಿಂದ 90ರಲ್ಲಿಯೂ ಅನೇಕ ಕಾರ್ಮಿಕ ಗಲಭೆಗಳು ನಡೆದವು. ಅವುಗಳಲ್ಲಿ ಹಿಲ್‌ಕಲ್ ಎಸ್ಟೇಟಿನ ಪ್ರತಿಭಟನಾ ಸಪ್ತಾಹವೂ ಒಂದು.

ಈ ಜಿಲ್ಲೆಯಲ್ಲಿ 5 ಕಾಲೇಜುಗಳೂ, 15 ಪದವಿಪೂರ್ವ ಕಾಲೇಜುಗಳೂ ಹಾಗೂ ಒಂದು ಪಾಲಿಟೆಕ್ನಿಕ್ ಮತ್ತು ಒಂದು ಐ.ಟಿ.ಐ. ಇವೆ. ಕಾಲೇಜಿನ ಮಟ್ಟದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಸುಮಾರು 6,000. 1981ರಲ್ಲಿ 6 ಬಾರಿ, 1982ರಲ್ಲಿ 12 ಬಾರಿ, 1983ರಲ್ಲಿ 5 ಬಾರಿ, 1984ರಲ್ಲಿ 7 ಬಾರಿ, 1985ರಲ್ಲಿ 6 ಬಾರಿ, 1986ರಲ್ಲಿ 4 ಬಾರಿ, 1987ರಲ್ಲಿ 5 ಬಾರಿ, 1988ರಲ್ಲಿ 3 ಬಾರಿ, 1989ರಲ್ಲಿ 10 ಬಾರಿ, 1990ರಲ್ಲಿ 2 ಬಾರಿ ವಿದ್ಯಾರ್ಥಿಗಳಿಂದ ಗಲಭೆಯುಂಟಾದ ವರದಿ ಆಗಿದೆ.

ವಿದ್ಯಾರ್ಥಿಗಳ ಗಲಭೆಗೆ ಪ್ರಮುಖ ಕಾರಣಗಳೆಂದರೆ, ಉಪಾಧ್ಯಾಯರ ಕೊರತೆ,ಕಾಲೇಜುಗಳಲ್ಲಿ ಸೌಲಭ್ಯದ ಕೊರತೆ. ಡೊನೇಶನ್ ಪಡೆಯುವಿಕೆ, ಕುಲ ಸಚಿವರ ವಿರುದ್ಧ ಆಪಾದನೆ, ಹಾಗೂ ಸಾರ್ವಜನಿಕ ಕಾರಣಗಳಾದ, ಬರಪೊಳೆ ಯೋಜನೆ,

ಕೈಗಾ ಯೋಜನೆ, ಮೊದಲಾದವುಗಳು. 1981–90ರ ಅವಧಿಯಲ್ಲಿ ಈ ಜಿಲ್ಲೆಯಲ್ಲಿಒಮ್ಮೆ(1986ರಲ್ಲಿ) ಪೋಲೀಸರು ಗಣೇಶ ಪ್ರತಿಮೆಯ ಮೆರವಣಿಗೆ ಸಮಯದಲ್ಲಿ ಗುಂಡು ಹಾರಿಸಿದ್ದರು.

ಮತೀಯ ಗಲಭೆಗಳು ಹೆಚ್ಚಾಗಿ, ಒಂದು ಪಂಗಡದ ಹುಡುಗನು ಮತ್ತೊಂದು ಪಂಗಡದ ಹುಡುಗಿಯನ್ನು ಛೇಡಿಸುವುದರ ಮೂಲ ಕಾರಣವಾಗಿ (ಅಂದರೆ ಬಸ್ಸಿನಲ್ಲಿ ಹೋಗುವಾಗ, ಸಿನಿಮಾ ಟಾಕೀಸಿನಲ್ಲಿ, ರಸ್ತೆಯಲ್ಲಿ, ಶಾಲೆ, ಕಾಲೇಜುಗಳಲ್ಲಿ) ನಡೆಯುತ್ತವೆ. ಇದರಿಂದ ಛೇಡಿಸಲ್ಪಟ್ಟ ಹುಡುಗಿಯ ಪಂಗಡದ ಗುಂಪು ರೊಚ್ಚಿಗೆದ್ದು ಇನ್ನೊಂದು ಪಂಗಡದವರ ಮನೆಗಳನ್ನು ಅಥವಾ ಅಂಗಡಿಗಳನ್ನು ಸುಟ್ಟು ಹಾಕುವುದು ಇತ್ಯಾದಿ ನಡೆಯುತ್ತದೆ. ಪ್ರತೀ ಬಾರಿಯೂ ಪೋಲೀಸ್ ಅಧಿಕಾರಿಗಳು ಶಾಂತಿ ಸಮಿತಿಯನ್ನು ರಚಿಸಿ, ಗಲಭೆಗಳನ್ನು ತಹಬಂದಿಗೆ ತರುತ್ತಿದ್ದರು. ಆದರೆ ಈ ರೀತಿ ಗಲಭೆಗಳು, ತಕ್ಷಣ ನಿಲ್ಲುತ್ತಿದ್ದರೂ ಕ್ರಮೇಣ ಇವುಗಳ ಸಂಖ್ಯೆ ಹೆಚ್ಚಾಗುತ್ತಿದೆ.

1988ರಲ್ಲಿ ಕುಶಾಲನಗರದಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವುದಕ್ಕೆ ಅನುಮತಿ ಕೊಡಬಾರದೆಂದು ಸರ್ಕಾರಕ್ಕೆ ಒತ್ತಾಯಿಸಲು, ವಿರೋಧಿ ಕ್ರಿಯಾ ಸಮಿತಿ ಎಂಬ ಸಮಿತಿಯು ಮೇಲ್ವಿಚಾರಣೆಯಲ್ಲಿ 'ಕುಶಾಲನಗರ ಬಂದ್'ನ್ನು ಆಚರಿಸಿದರು. ನಂತರ ಧರಣಿ, ಪಂಜಿನ ಮೆರವಣಿಗೆ, ಕರಾಳ ದಿನ ಮೊದಲಾದವುಗಳನ್ನು ಆಚರಿಸಿದರು. ಮಡಿಕೇರಿ ಗ್ರಾಮೀಣ ಪ್ರದೇಶಕ್ಕೆ ಸೇರಿದ ಹಾಕತ್ತೂರು ಗ್ರಾಮದ ಒಬ್ಬ ಗೃಹಸ್ಥನು ಆರೋಗ್ಯ ಕೇಂದ್ರದ ದಾದಿಯೊಡನೆ ದುರ್ವರ್ತನೆ ಮಾಡಿದ್ದರಿಂದ ಸುಮಾರು 200-250 ದಾದಿಯರು, ಮಡಿಕೇರಿಯಲ್ಲಿ ಮೆರವಣಿಗೆ, ಪ್ರದರ್ಶನಗಳನ್ನು ಮಾಡಿದರು. ಚುನಾವಣೆಗಳ ಸಮಯದಲ್ಲಿಯೂ ಗಲಭೆಗಳು ಕಂಡು ಬರುತ್ತಿದ್ದವು. 1989ರಲ್ಲಿ 7–8 ಬಾರಿ ಹಾಗೂ 1990ರಲ್ಲಿ 5–6 ಬಾರಿ ಗಲಭೆಗಳಾಗಿದ್ದವು.

1980 ರಿಂದ 1989ರ ವರೆಗೆ ಕೊಡಗು ಜಿಲ್ಲೆಯಲ್ಲಿ ವರದಿಯಾದ ಕೆಲವು ಅಪರಾಧಗಳ ಪಟ್ಟಿ.

| ಅಪರಾಧ | 1980 | 1981 | 1982 | 1983 | 1984 | 1985 | 1986 | 1987 | 1988 | 1989 |
|---|---|---|---|---|---|---|---|---|---|---|
| ಕೊಲೆ | 23 | 19 | 24 | 28 | 28 | 13 | 28 | 20 | 19 | 33 |
| ಡಕಾಯಿತಿ | — | — | 2 | 3 | — | 1 | — | — | 1 | — |
| ದರೋಡೆ | 8 | 7 | 7 | 10 | 3 | 2 | 2 | 2 | 2 | — |
| ಕಳ್ಳತನ | 155 | 258 | 429 | 550 | 353 | 292 | 304 | 311 | 353 | 310 |
| ಬಲಾತ್ಕಾರ | 5 | 5 | 3 | 2 | 5 | 5 | 3 | 5 | 5 | 6 |
| ದೊಂಬಿ | 8 | 38 | — | 113 | 65 | 55 | 94 | 44 | 44 | 38 |
| ಇತರೆ ಅಪರಾಧಗಳು | 1,474 | 1,306 | 1,173 | 1,283 | 1,128 | 1,092 | 1,001 | 1,201 | 1,178 | |

1981 ರಿಂದ 1989ರ ವರೆಗೆ, ನಡೆದ ಕೊಲೆಗಳಿಗೆ ಕಾರಣಗಳನ್ನು ತೋರಿಸುವ ಪಟ್ಟಿ.

| ಕಾರಣಗಳು | 1980 | 1981 | 1982 | 1983 | 1984 | 1985 | 1986 | 1987 | 1988 | 1989 |
|---|---|---|---|---|---|---|---|---|---|---|
| ಕುಟುಂಬ ಕಲಹ | 1 | 4 | — | — | — | — | — | — | 2 | 10 |
| ಅನೈತಿಕ ಸಂಬಂಧಕ್ಕಾಗಿ | 1 | 1 | 4 | 3 | 2 | 1 | — | — | 2 | 2 |
| ಲಾಭಕ್ಕಾಗಿ | 1 | 1 | — | 3 | 4 | 2 | 2 | 2 | 1 | — |
| ಆಸ್ತಿ ಕಲಹ | 3 | 3 | 1 | 4 | 2 | 1 | 1 | 4 | 2 | 5 |
| ದ್ವೇಷ | 3 | 4 | 11 | 7 | 4 | 3 | 9 | 4 | 3 | — |
| ಪ್ರೇಮ ಪ್ರಕರಣ | 1 | 1 | — | — | — | — | — | — | — | — |
| ಉನ್ಮತ್ತನಾಗಿದ್ದರಿಂದ | 4 | 2 | 1 | 4 | 3 | 2 | 5 | — | 2 | — |
| ಇತರೆ ಕಾರಣಗಳು | 9 | 3 | 7 | 7 | 13 | 4 | 11 | 10 | 7 | 16 |
| ಮೊತ್ತ | 23 | 24 | 24 | 28 | 28 | 13 | 28 | 20 | 18 | 16 |
| ಆತ್ಮಹತ್ಯೆ | 96 | 97 | 112 | 210 | 146 | 175 | 184 | 173 | 218 | 134 |

ಕೊಡಗು ಜಿಲ್ಲೆಯಲ್ಲಿ 1980 ರಿಂದ 1989ರ ವರೆಗೆ, ಕಳುವಾದ ಹಾಗೂ ಪತ್ತೆಹಚ್ಚಿದ ಆಸ್ತಿಯ ಮೌಲ್ಯವನ್ನು ತೋರಿಸುವ ಪಟ್ಟಿ.

(ಲಕ್ಷ ರೂ.ಗಳಲ್ಲಿ)

| ವರ್ಷ | ಕಳುವಾದ ಆಸ್ತಿಯ ಮೌಲ್ಯ ರೂ. | ಸಿಕ್ಕಿದ ಆಸ್ತಿಯ ಮೌಲ್ಯ ರೂ. | ಶೇಕಡಾ |
|---|---|---|---|
| 1980 | 7.67 | 4.1 | 53.42 |
| 1981 | 10.00 | 7.68 | 76.80 |
| 1982 | 6.61 | 1.81 | 27.38 |
| 1983 | 9.89 | 3.75 | 37.90 |
| 1984 | 10.93 | 6.82 | 62.37 |
| 1985 | 15.32 | 9.3 | 60.71 |
| 1986 | 16.49 | 2.36 | 14.30 |
| 1987 | 24.94 | 11.31 | 45.35 |
| 1988 | 17.77 | 6.64 | 37.35 |
| 1989 | 19.07 | 10.92 | 57.28 |

1980 ರಿಂದ 1989ರ ವರೆಗೆ ಕೊಡಗು ಜಿಲ್ಲೆಯಲ್ಲಿ ಉಂಟಾದ ಅಪಘಾತದಿಂದ ಸಾವು ಮತ್ತು ಅವುಗಳ ಕಾರಣಗಳು.

| ಸಾವಿಗೆ ಕಾರಣಗಳು | 1980 | 81 | 82 | 83 | 84 | 85 | 86 | 87 | 88 | 89 |
|---|---|---|---|---|---|---|---|---|---|---|
| ಅಪಘಾತ | 25 | 23 | 20 | 21 | 29 | 30 | 10 | 5 | 30 | 35 |
| ಹಾವು ಕಚ್ಚುವುದರಿಂದ | — | — | — | — | 6 | — | — | 3 | 2 | 2 |
| ವಿದ್ಯುತ್ ಸ್ಪರ್ಶದಿಂದ | — | — | — | — | — | — | — | — | 3 | 5 |
| ಮಿಂಚಿನಿಂದ | — | — | — | — | — | — | — | — | — | 3 |
| ವಾಹನ ಅಪಘಾತ | 23 | 25 | 36 | 19 | 34 | 33 | 34 | 39 | 39 | 40 |
| ಎತ್ತರದಿಂದ ಬೀಳುವಿಕೆ | — | — | — | — | — | — | — | — | 1 | 11 |
| ತೂಕವಾದ ವಸ್ತು ಮೇಲೆ ಬೀಳುವುದರಿಂದ | — | — | — | — | — | — | — | — | — | — |
| ಸುಟ್ಟಗಾಯದಿಂದ | — | — | 6 | — | 3 | 1 | — | 6 | 21 | 5 |
| ಕ್ರೂರ ಪ್ರಾಣಿಯಿಂದ | 2 | — | — | — | — | — | — | — | 7 | 4 |
| ಗಣಿಗಳಲ್ಲಿ | — | — | — | — | — | — | — | — | — | — |
| ಇತರೆ ಕಾರಣಗಳು | 36 | 58 | 73 | 160 | 68 | 77 | 54 | 75 | 43 | 51 |

ಕೊಡಗು ಜಿಲ್ಲೆಯಲ್ಲಿ 1980 ರಿಂದ 89ರವರೆಗಿನ ಕೆಲವು ಅಪರಾಧಗಳ ಪತ್ತೆ ವಿವರ (ಶೇಕಡಾ)

| ಅಪರಾಧಗಳು | 1980 | 81 | 82 | 83 | 84 | 85 | 86 | 87 | 88 | 89 |
|---|---|---|---|---|---|---|---|---|---|---|
| ಕೊಲೆ | 21 | 40 | 89 | 67 | 78 | 80 | 85 | 100 | 100 | 100 |
| ಡಕಾಯಿತಿ | — | — | 50 | 100 | — | 100 | — | — | 100 | — |
| ದರೋಡೆ | 36 | 48 | 37 | 70 | 66 | 50 | 50 | 33 | 34 | 50 |
| ಮನೆಕಳ್ಳತನ | 58 | 62 | 37 | 39 | 62 | 65 | 22 | 45 | 37 | 51 |
| ಗಲಭೆ | 90 | 95 | 80 | 85 | 90 | 60 | 70 | 100 | 100 | 75 |
| ಅತ್ಯಾಚಾರ | 100 | 100 | 100 | 100 | 100 | 90 | 60 | 60 | 100 | 100 |

ಕೊಡಗು ಜಿಲ್ಲೆಯಲ್ಲಿ 1980 ರಿಂದ 1989ರವರೆಗೆ ನಡೆದ ವರದಿಯಾದ ಶ್ರೀಗಂಧದ ಕಳುವಿನ ಪ್ರಕರಣಗಳ ವಿವರ ಹೀಗಿದೆ. 1980–139; 1981–165; 1982–173; 1983–189; 1984–107; 1985–127; 1986–114; 1987–115; 1988–135; 1989–105.

1980 ರಿಂದ 1989ರ ವರೆಗೆ ಕೊಡಗು ಜಿಲ್ಲಾ ಮಟ್ಟದ ಪ್ರಾಸಿಕ್ಯೂಶನ್‌ಗಳು ಮತ್ತು ಶಿಕ್ಷೆಗಳಾದ ಪ್ರಕರಣಗಳು.

| ವರ್ಷ | ಪ್ರಾಸಿಕ್ಯೂಶನ್ | ಶಿಕ್ಷೆ ವಿಧಿಸಲ್ಪಟ್ಟವು |
|---|---|---|
| 1980 | 1,476 | 229 |
| 1981 | 1,385 | 148 |
| 1982 | 1,388 | 140 |
| 1983 | 1,643 | 138 |
| 1984 | 1,101 | 91 |
| 1985 | 1,071 | 78 |
| 1986 | 1,139 | 84 |
| 1987 | 1,157 | 82 |
| 1988 | 1,249 | 391 |
| 1989 | 1,637 | 63 |

31-3-1990ರಲ್ಲಿದ್ದಂತೆ ಕೊಡಗು ಜಿಲ್ಲಾ ಪೋಲೀಸ್ ದಳದ ವಿವರ :

ಪೋಲೀಸ್ ಅಧೀಕ್ಷಕರು 1; ಡೆಪ್ಯುಟಿ ಪೋಲೀಸ್ ಅಧೀಕ್ಷಕರು 3.

ಎ) ನಾಗರಿಕ :

| | | |
|---|---|---|
| 1) | ಪೋಲೀಸ್ ಇನ್ಸ್‌ಪೆಕ್ಟರ್ | 4 |
| 2) | ಪೋಲೀಸ್ ಸಬ್ ಇನ್ಸ್‌ಪೆಕ್ಟರ್ | 26 |
| 3) | ಸಹಾಯಕ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ | 3 |
| 4) | ಮುಖ್ಯ ಕಾನ್‌ಸ್ಟೆಬಲ್ | 114 |
| 5) | ಕಾನ್‌ಸ್ಟೆಬಲ್ | 351 |
| | ಒಟ್ಟು | 498 |

ಬಿ) ಮೀಸಲು ಸಶಸ್ತ್ರದಳ :

| | | |
|---|---|---|
| 1) | ಸಶಸ್ತ್ರ ಪೋಲೀಸ್ ಇನ್ಸ್‌ಪೆಕ್ಟರ್ | 1 |
| 2) | ಸಶಸ್ತ್ರ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ | 3 |
| 3) | ಸಶಸ್ತ್ರ ಸಹಾಯಕ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ | 5 |
| 4) | ಸಶಸ್ತ್ರ ಮುಖ್ಯ ಕಾನ್‌ಸ್ಟೆಬಲರು | 30 |
| 5) | ಸಶಸ್ತ್ರ ಕಾನ್‌ಸ್ಟೆಬಲರು | 161 |

ನಿಸ್ತಂತು ವಿಭಾಗ

| | | |
|---|---|---|
| 1) | ಸಬ್ ಇನ್ಸ್‌ಪೆಕ್ಟರ್ | 3 |
| 2) | ಸಹಾಯಕ ಸಬ್‌ಇನ್ಸ್‌ಪೆಕ್ಟರ್ | 3 |
| 3) | ಮುಖ್ಯ ಕಾನ್‌ಸ್ಟೆಬಲ್ | 13 |
| 4) | ಕಾನ್‌ಸ್ಟೆಬಲ್ | 7 |
| | ಒಟ್ಟು | 226 |

ಇದರಲ್ಲಿ ಒಬ್ಬ ಮುಖ್ಯ ಕಾನ್‌ಸ್ಟೆಬಲ್ ಸೇರಿ ಇಬ್ಬರು ಮಹಿಳಾ ಪೋಲೀಸರಿದ್ದಾರೆ.

ಆಡಳಿತ 5

ಸಿಬ್ಬಂದಿ

| | | |
|---|---|---|
| 1) | ಪತ್ರಾಂಕಿತ ಕೇಂದ್ರ ಅಧಿಕಾರಿ | 1 |
| 2) | ಇತರೆ ಸಿಬ್ಬಂದಿ | 37 |
| | | 38 |
| | ಒಟ್ಟು | 762 + 4 |

31-3-90ರಲ್ಲಿದ್ದಂತೆ ಕೊಡಗು ಜಿಲ್ಲೆಯಲ್ಲಿ ಪೋಲೀಸ್ ಠಾಣೆಗಳ ವಿವರ :

1) ಪೋಲೀಸ್ ಸ್ಟೇಷನ್‌ಗಳು 16, 2) ಪೋಲೀಸ್ ಔಟ್‌ಪೋಸ್ಟ್ 15, 3) ಸಂಚಾರಿದಳ 3, 4) ಸಾರಿಗೆ ನಿಯಂತ್ರಣ ಪೋಲೀಸ್-ಇಲ್ಲ, 5) ಆಹಾರ ಕೋಶ ಇಲ್ಲ, 6) ಅರಣ್ಯಕೋಶ-1, 7) ಗುಪ್ತದಳ-1, 8) ಜಾಗೃತ ದಳ-1, 9) ರೇಡಿಯೋದಳ-1 ಮತ್ತು 10) ಡಿ.ಎ.ಆರ್. -1.

ಕೊಡಗು ಜಿಲ್ಲೆಯಲ್ಲಿ ಸಿವಿಲಿಯನ್ ರೈಫಲ್ ತರಬೇತಿ ಅಸ್ತಿತ್ವದಲ್ಲಿದ್ದು 31-12-89ರಲ್ಲಿ ಒಂದು ಕೇಂದ್ರವಿದ್ದು ಆ ಸಾಲಿನಲ್ಲಿ ಅಂದರೆ 1-7-89 ರಿಂದ 31-12-89ರ ಅವಧಿಯಲ್ಲಿ ತರಬೇತಿ ಹೊಂದಿದ 25 ಜನರೂ ಸೇರಿ ಒಟ್ಟು 211 ಮಂದಿ ತರಬೇತಿ ಪಡೆದಿದ್ದಾರೆ.

ಜಿಲ್ಲೆಯಲ್ಲಿರುವ ಎಲ್ಲಾ 305 ಗ್ರಾಮಗಳನ್ನು ಗ್ರಾಮೀಣ ರಕ್ಷಣಾ ದಳದ ನಿಯಮಗಳಿಗೆ ಒಳಪಡಿಸಲಾಗಿದ್ದು, ಒಟ್ಟು 143 ಗ್ರಾಮ ರಕ್ಷಣಾದಳಗಳಿದ್ದು, 1989ರವರೆಗೂ 2,290 ಜನರನ್ನು ನೇಮಕ ಮಾಡಲಾಗಿದೆ. ಇವರಲ್ಲಿ 143 ದಳಪತಿಗಳೂ ಸೇರಿದ್ದಾರೆ. ಹಾಗೂ ಪೋಲೀಸ ಪಟೇಲರ ಕರ್ತವ್ಯಕ್ಕೆ 100 ದಳಪತಿಗಳನ್ನು ತೆಗೆದುಕೊಳ್ಳಲಾಗಿದೆ. ಒಟ್ಟು 2,280 ಗ್ರಾಮ ರಕ್ಷಣಾದಳಕ್ಕೆ ನೇಮಕ ಮಾಡಿರುವ ವರಲ್ಲಿ, ಪರಿಶಿಷ್ಟಜಾತಿ-89, ಪರಿಶಿಷ್ಟ ಪಂಗಡ-46, ಹಿಂದುಳಿದ ಜಾತಿ 128 ಮತ್ತು ಇತರೆ 2,026 ಮಂದಿ ಇದ್ದಾರೆ.

ನ್ಯಾಯವಾದಿಗಳ (ವಕೀಲರು) ಸಂಘ, ಮಡಿಕೇರಿಯು 1928ರಲ್ಲಿ ಪ್ರಾರಂಭವಾಯಿತು. ಆಗ 5 ಜನ ಸದಸ್ಯರಿದ್ದು ಈಗ ಅಂದರೆ 1991ರಲ್ಲಿ 106 ಸದಸ್ಯರಿದ್ದಾರೆ. ಇವರಲ್ಲಿ 4 ಮಹಿಳಾ ನ್ಯಾಯವಾದಿಗಳಿದ್ದಾರೆ. ಸೋಮವಾರಪೇಟೆಯ ನ್ಯಾಯವಾದಿಗಳ ಸಂಘವು 1979ರಲ್ಲಿ 10 ಸದಸ್ಯರಿಂದ ಪ್ರಾರಂಭವಾಯಿತು. 1991ರಲ್ಲಿ 19 ಜನರಿದ್ದು ಒಬ್ಬರು ಮಹಿಳಾ ನ್ಯಾಯವಾದಿಗಳಿದ್ದಾರೆ. ವೀರರಾಜಪೇಟೆಯಲ್ಲಿ, ನ್ಯಾಯವಾದಿಗಳ ಸಂಘವು 1962 ನವೆಂಬರ್‌ನಲ್ಲಿ 9 ಜನ ಸದಸ್ಯರಿಂದ ಪ್ರಾರಂಭವಾಯಿತು. 1991ರಲ್ಲಿ 68 ಸದಸ್ಯರಿದ್ದು ಇಬ್ಬರು ಮಹಿಳಾ ನ್ಯಾಯವಾದಿಗಳಿದ್ದಾರೆ.

1981-82 ರಿಂದ 1990-91ರ ವರೆಗೆ ಕೊಡಗು ಜಿಲ್ಲೆಯಲ್ಲಿ ಪೋಲಿಸ್ ವ್ಯವಸ್ಥೆಯ ಖರ್ಚು.

(ಲಕ್ಷ ರೂ.ಗಳಲ್ಲಿ)

| ವರ್ಷ | ಖರ್ಚು | ವರ್ಷ | ಖರ್ಚು |
|---|---|---|---|
| 1981–82 | 51.85 | 1986—87 | 111.10 |
| 1982—83 | 57.86 | 1987—88 | 150.50 |
| 1983—84 | 70.81 | 1988—89 | ದೊರೆತಿಲ್ಲ |
| 1984—85 | 71.58 | 1989—90 | 200.20 |
| 1985—86 | 76.54 | 1990—91 | 250.00 |

ಪೋಲೀಸ್ ಕ್ಷೇಮನಿಧಿಯಿಂದ ಈ ಜಿಲ್ಲೆಯಲ್ಲಿ ನಡೆಸಿದ ಕಲ್ಯಾಣ ಕಾರ್ಯಕ್ರಮಗಳ ವಿವರ ಹೀಗಿವೆ: 1) 1983 ರಲ್ಲಿ 189 ಜನರಿಗೂ, 1984ರಲ್ಲಿ 172 ಜನರಿಗೂ, 1985ರಲ್ಲಿ 176 ಜನರಿಗೂ, 1986ರಲ್ಲಿ 180 ಜನರಿಗೂ 1987ರಲ್ಲಿ 187 ಜನರಿಗೂ, 1988ರಲ್ಲಿ 249 ಜನರಿಗೂ ಆರ್ಥಿಕ ಸಹಾಯ ಒದಗಿಸಿದೆ.

2) ಪ್ರತೀ ವರ್ಷವೂ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಓದುತ್ತಿರುವ ಆರಕ್ಷಕರ ಮಕ್ಕಳಿಗೆ ವಿದ್ಯಾಭ್ಯಾಸದ ಸಹಾಯವನ್ನು ಮಂಜೂರು ಮಾಡಿ ಪ್ರತಿಯೊಬ್ಬರೂ ಇದರ ಸೌಲಭ್ಯವನ್ನು ಪಡೆಯುವಂತೆ ಮಾಡಲಾಗಿದೆ.

3) ಆರಕ್ಷಕರಿಗೂ ಅವರ ಕುಟುಂಬದವರಿಗೂ ಅತೀ ತುರ್ತು ಪರಿಸ್ಥಿತಿಯಲ್ಲಿ ವೈದ್ಯಕೀಯ ಸಹಾಯವಾಗಿ ಅತೀ ಹೆಚ್ಚಿನ ಹಣ ಸಹಾಯವನ್ನು ಕ್ಷೇಮ ನಿಧಿಯಿಂದ ಕೊಡಲಾಗಿದೆ.

4) ಆರಕ್ಷಕ ಜನರ ಮತ್ತು ಅವರ ಕುಟುಂಬದವರ ಮನೋರಂಜನೆಗಾಗಿ, ದೂರದರ್ಶನ ಮತ್ತು ವಿ.ಸಿ.ಪಿಯನ್ನು ಅಳವಡಿಸಿ ವಾರಕ್ಕೊಮ್ಮೆ ಸಿನಿಮಾವನ್ನು ಪ್ರದರ್ಶಿಸಲಾಗುತ್ತಿದೆ.

5) ಸುಮಾರು 200 ಜನ ಆರಕ್ಷಕರ ಕುಟುಂಬೀಯರಿಗೆ ಹೊಲಿಗೆ ಯಂತ್ರವನ್ನು ಬ್ಯಾಂಕಿನ ಸಾಲದ ಮುಖಾಂತರ ವಿತರಿಸಿ ಬಿಡುವಿನ ವೇಳೆಯಲ್ಲಿ ಬಟ್ಟೆಗಳನ್ನು ಹೊಲಿಯಲು ಸಹಾಯವಾಗುವಂತೆ ಮಾಡಲಾಗಿದೆ.

6) ಕಲ್ಯಾಣ ಕೇಂದ್ರದಲ್ಲಿ ಸುಮಾರು 14 ಹೊಲಿಗೆ ಯಂತ್ರಗಳನ್ನು ಅಳವಡಿಸಿ ಆರಕ್ಷಕರ ಸಮವಸ್ತ್ರಗಳನ್ನು ಹೊಲಿ

ಯಲು ಏರ್ಪಾಡು ಮಾಡಿ, ಸುಮಾರು 800 ಜೊತೆ ಸಮ ವಸ್ತ್ರಗಳನ್ನು ಹೊಲಿಸಿ ರೂ. 20,000ಗಳವರೆಗೆ ಹೊಲಿಯುವ ಜನರಿಗೆ ಧನಸಹಾಯ ಮಾಡಲಾಗಿದೆ.

(7) ಆರಕ್ಷಕ ಜನರ ಉಪಯೋಗಕ್ಕಾಗಿ ಸುಲಭರೂಪದಲ್ಲಿ ಸುಮಾರು 200 ಅಡುಗೆ ಅನಿಲ ಮತ್ತು ಸ್ಟೌವ್‌ಗಳನ್ನು ವಿತರಿಸಲಾಗಿದೆ.

(8) ಮನೋರಂಜನೆ ಮತ್ತು ಸಹಾಯ ಧನವಾಗಿ ಸುಮಾರು 200 ಜನರಿಗೆ ರಾಷ್ಟ್ರೀಕೃತ ಬ್ಯಾಂಕಿನ ಸಹಾಯದಿಂದ ದೂರದರ್ಶನವನ್ನು ವಿತರಣೆ ಮಾಡಿ ಇದರ ಲಾಭವನ್ನು ಪಡೆಯುವಂತೆ ಏರ್ಪಾಡು ಮಾಡಲಾಗಿರುತ್ತದೆ.

(9) ಜಿಲ್ಲೆಯ ಎಲ್ಲ ಆರಕ್ಷಕ ಜನರಿಗೂ ಸಹಾಯವಾಗು ವೀರರಾಜಪೇಟೆಯಲ್ಲಿ ಒಂದು ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ಹೊಲಿಗೆ ಯಂತ್ರವನ್ನು ಅಳವಡಿಸಿ ಆರಕ್ಷಕ ಕುಟುಂಬದವರಿಗೆ ಹೊಲಿಗೆ ಕಲಿಸಲು, ಒಬ್ಬ ಶಿಕ್ಷಕಿಯನ್ನು ನೇಮಿಸಲಾಗಿರುತ್ತದೆ. ಅಲ್ಲದೆ ಶಿಶುವಿಹಾರವನ್ನು ಸ್ಥಾಪಿಸಲಾಗುತ್ತಿದೆ.

(10) ಕೇಂದ್ರ ಸ್ಥಾನದಲ್ಲಿ ಒಂದು ಹೊಲಿಗೆ ಕಲಿಕೆ ಶಾಲೆ ಮತ್ತು ಶಿಶುವಿಹಾರವನ್ನು ಸ್ಥಾಪಿಸಿ ಇಬ್ಬರು ಬೋಧಕಿಯರನ್ನು ನೇಮಿಸಲಾಗಿರುತ್ತದೆ.

(11) ನಿವೃತ್ತ ಆರಕ್ಷಕ ನಿಧಿಯಲ್ಲಿ ಈಗ ಸಾಕಷ್ಟು ಹಣವಿದ್ದು ಇದರ ಲಾಭವನ್ನು ಪಡೆಯಲು ನಿವೃತ್ತ ಅಧಿಕಾರಿಗಳ ನಿಧಿಯು ಕೇಂದ್ರ ಕಚೇರಿಗೆ ಪತ್ರ ಬರೆದು, ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸಹಾಯಕ್ಕೆ ಅನುಕೂಲವಾಗುವಂತೆ ಧನಸಹಾಯ ಮಾಡಲು ಶಿಫಾರಸ್ಸು ಮಾಡಿದೆ.

(12) ನಿವೃತ್ತ ಆರಕ್ಷಕ ಅಧಿಕಾರಿಗಳು ಮರಣ ಹೊಂದಿದ ಪಕ್ಷದಲ್ಲಿ ಸಂಬಂಧಪಟ್ಟವರು ಆ ಸ್ಥಳದ ಪೋಲೀಸ್ ಠಾಣೆಯ ಮುಖಾಂತರ ಅರ್ಜಿ ಸಲ್ಲಿಸಿದ್ದು ರೂ. 100ನ್ನು ಧನ ಸಹಾಯವಾಗಿ ಮಂಜೂರು ಮಾಡಲಾಗಿದೆ. ಆದರೆ ಈ ಹಣವು ಅತೀ ಕಡಿಮೆ ಎಂದು ಕೇಂದ್ರ ಕಛೇರಿಗೆ ರೂ. 500 ಗಳವರೆಗೆ ಪರಿಹಾರವಾಗಿ ಮಂಜೂರು ಮಾಡಲು ಶಿಫಾರಸು ಮಾಡಲಾಗಿದೆ.

(13) ಕ್ಷೇಮ ನಿಧಿಯಲ್ಲಿರುವ ಹಣದಲ್ಲಿ ಒಂದು ಅಧಿಕಾರಿಗಳ ವಸತಿ ಗೃಹವನ್ನು ನಿರ್ಮಾಣ ಮಾಡಲು ಸರ್ಕಾರದ ಅನುಮತಿಯನ್ನು ಕೋರಲಾಗಿದೆ.

ಅರಣ್ಯ ಸಂಪತ್ತನ್ನು ಸಂರಕ್ಷಿಸಲೋಸುಗ ಮಡಿಕೇರಿಯಲ್ಲಿ 1980 ರಿಂದ, ಪೋಲೀಸ್ ಸೂಪರಿಂಟೆಂಡೆಂಟ್, ಸಿ.ಐ.ಡಿ. ಅರಣ್ಯ ಘಟಕ ಇವರ ಕಚೇರಿ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿನ ಸಿಬ್ಬಂದಿ ಒಟ್ಟು 9 ಮಂದಿ ಇದ್ದಾರೆ. ಈ ಕಚೇರಿಯ ವ್ಯಾಪ್ತಿ ಕೊಡಗು, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಅರಣ್ಯಮೊಬೈಲ್‌ಸ್ಕ್ವಾಡ್‌ಗಳನ್ನು ವೀರರಾಜಪೇಟೆಯಲ್ಲಿ (1 ಪೋಲೀಸ್ ಸೂಪರಿಂಟೆಂಡೆಂಟ್, 6 ಹೆಚ್.ಸಿ. ಮತ್ತು 1 ಪಿ.ಸಿ.) 1972ರಲ್ಲೂ ಮಡಿಕೇರಿಯಲ್ಲಿ (1 ಪಿ. ಎಸ್ ಐ, 2 ಹೆಚ್.ಸಿ. ಮತ್ತು 1 ಪಿ.ಸಿ.) ಮತ್ತು ಮಾಕುಟ್ಟದಲ್ಲಿ (1 ಪಿ.ಎಸ್.ಐ., 2 ಹೆಚ್.ಸಿ. ಮತ್ತು 1 ಪಿ.ಸಿ.) 1980 ರಲ್ಲಿ ಸ್ಥಾಪಿಸಲಾಯಿತು, ಹಾಗೂ ಈ ಜಿಲ್ಲೆಯಲ್ಲಿ ಕೆಳಕಂಡ 14 ಚೆಕ್‌ಪೋಸ್ಟ್ ದಳಗಳನ್ನು ಸ್ಥಾಪಿಸಲಾಯಿತು ; ಮಾಕುಟ್ಟ, ಮಾತ್ರೆ, ಕೋಳಿಮಕ್ಕಿ, ಉಡುಂಬೆ, ಮಾಂಬೈಲ್ ಕುರತ್, ಬೈಕಟ್ಟೆ, ಚಂಬೇರಿ, ಕೋಟಿಕಾನ, ಮಂದಗಾಣ, ಬೀಕಾಡು, ಮುಂದೋಟೆ, ತಲಪುಕ್ಕಾಲ ಹಾಗೂ ಕೀಪಳ್ಳಿ.

1986 ರಿಂದ 1990ರ ವರೆಗೆ, ಕೊಡಗು ಜಿಲ್ಲೆಯಲ್ಲಿ ಶ್ರೀಗಂಧದ ಕಳುವುಗಳನ್ನು ಪತ್ತೆ ಹಚ್ಚಿದ ಹಾಗೂ ತತ್ಸಂಬಂಧ ದಾವೆಗಳ ವಿವರಗಳನ್ನು ಪಟ್ಟಿಯಲ್ಲಿ ಕೊಡಲಾಗಿದೆ.

| ಕ್ರ. ಸಂ. | ವರ್ಷ | ಶ್ರೀಗಂಧದ ಕಳುವು | | | ಇತರ ಮರಗಳ ಕಳುವು | | |
|---|---|---|---|---|---|---|---|
| | | ದಾವೆ | ದಸ್ತಗಿರಿ ಸಂಖ್ಯೆ | ಮೌಲ್ಯ (ಲಕ್ಷ ರೂ.) | ದಾವೆ | ದಸ್ತಗಿರಿ ಸಂಖ್ಯೆ | ಮೌಲ್ಯ (ಲಕ್ಷರೂ.) |
| 1. | 1986 | 14 | 1 | 3.36 | 112 | 180 | 12.45 |
| 2. | 1987 | 18 | 37 | 5.13 | 141 | 201 | 8.35 |
| 3. | 1988 | 30 | — | 7.32 | 107 | — | 12.72 |
| 4. | 1989 | 86 | 43 | 2.40 | 145 | 150 | 17.80 |
| 5. | 1990 | 92 | 57 | 15.31 | 74 | 58 | 5.62 |

ಆಧಾರ : ಪೋಲಿಸ್ ಇಲಾಖೆ – ಅರಣ್ಯ ಘಟಕ, ಕೊಡಗು.

ಈ ಜಿಲ್ಲೆಯಲ್ಲಿ ಜಿಲ್ಲಾ ಕಾನೂನು ಮಂಡಳಿ 1983ರಲ್ಲಿ ಅಸ್ತಿತ್ವಕ್ಕೆ ಬಂದಿತು. 1984 ರಿಂದ 1990ರ ವರೆಗೆ ಕಾನೂನು ನೆರವು ನೀಡಲ್ಪಟ್ಟಿರುವ ಅಭ್ಯರ್ಥಿಗಳ ಸಂಖ್ಯೆ ಹೀಗಿದೆ. 1984–39: 1985–100 ; 1986–146; 1987–107 ; 1988–93 ; 1989–96 ; 1990–108. ಈ ಕಚೇರಿಯಲ್ಲಿ ಒಬ್ಬ ಕಾರ್ಯದರ್ಶಿ (ಗೌರವ ಹುದ್ದೆ), ಒಬ್ಬ ಆಡಳಿತ ಸಹಾಯಕ ಹಾಗೂ ಒಬ್ಬ ದಫೇದಾರ ಇದ್ದಾರೆ.

ಕೊಡಗು ಜಿಲ್ಲೆಯಲ್ಲಿನ ಪೋಲೀಸ್ ಸಿಬ್ಬಂದಿಗಳಿಗೆ ನೀಡಲ್ಪಟ್ಟ ಕೆಲವು ಪದಕಗಳ ವಿವರ : 1) ಶ್ರೀ ಎಚ್. ಬಿ. ಪಾಪು, ಪಿ.ಎಸ್.ಐ. ಅರಣ್ಯ ಜಾಗೃತದಳ, ಮಾಕುಟ್ಟ ಇವರಿಗೆ 1987ರಲ್ಲಿ, ಶ್ರೀಗಂಧ ಕಳ್ಳ ಸಾಗಾಣಿಕೆಯನ್ನು ಪತ್ತೆಹಚ್ಚಿದ್ದಕ್ಕಾಗಿ ಮುಖ್ಯಮಂತ್ರಿಯವರ ಕಂಚಿನ ಪದಕವನ್ನು ನೀಡಲಾಗಿತ್ತು. ಶ್ರೀ ಬಿ. ಮಹಾಬಲಶೆಟ್ಟಿ, ಪಿ.ಎಸ್.ಐ., ಅರಣ್ಯ ಜಾಗೃತದಳ, ಮಾಕುಟ್ಟ ಇವರಿಗೆ 1989ರಲ್ಲಿ ಮುಖ್ಯಮಂತ್ರಿಯವರ ಬೆಳ್ಳಿಪದಕ ನೀಡಲಾಗಿತ್ತು. 2) ಶ್ರೀ ನಾಗೇಶ್ವರ ರಾವ್, ಪಿ. ಎಸ್. ಐ., ಅರಣ್ಯ ಜಾಗೃತದಳ, ಮಡಿಕೇರಿ, ಇವರಿಗೆ ಮುಖ್ಯಮಂತ್ರಿಯವರ ಬೆಳ್ಳಿ ಪದಕ ನೀಡಲಾಗಿತ್ತು. 3) ಶ್ರೀ ಎಂ. ಟಿ. ಬೋಪಯ್ಯ, ಹೆಡ್ ಕಾನ್ಸ್‌ಟೇಬಲ್, ಅರಣ್ಯ ಜಾಗೃತದಳ ಇವರಿಗೆ 1991ರಲ್ಲಿ ಮುಖ್ಯಮಂತ್ರಿಯವರ ಬೆಳ್ಳಿಪದಕ ನೀಡಲಾಗಿತ್ತು.

1989-90 ಮತ್ತು 1990-91ರಲ್ಲಿ ಕೊಡಗು ಜಿಲ್ಲೆಯಲ್ಲಿ ಅಕ್ರಮ ಮದ್ಯ ಉತ್ಪಾದನೆ, ಮಾರಾಟದ ಬಗ್ಗೆ ಕೈಕೊಂಡ ಕ್ರಮಗಳ ವಿವರ : 1989-90ರಲ್ಲಿ ಅಕ್ರಮ ಸಾರಾಯಿ ಹೊಂದಿದ್ದ ಬಗ್ಗೆ 525 (359) ಪ್ರಕರಣಗಳು ದಾಖಲಾಗಿದ್ದು, 463 (177) ದಾಖಲಾತಿಗಳು ನ್ಯಾಯಾಲಯದಿಂದ ಖುಲಾಸೆ ಆದವು. ನಾಶಮಾಡಿದ ಸಾರಾಯಿ ಮೊದಲಾದವುಗಳ ವಿವರ : ಸಾರಾಯಿ 1,63,035 (1,11,122) ಲೀಟರ್, ಗಾಂಜಾ 3,200 ಕೆ. ಜಿ. (23,350), ದೇಶೀಯ ಮಾದಕ ದ್ರವ್ಯ (ಇಂಡಿಯನ್ ಮೇಡ್ ಲಿಕರ್) 1,893 ಲೀಟರ್ (1,930), ಸಾರಾಯಿ 68,000 ಲೀಟರ್, ಸ್ಪಿರಿಟ್ 750 ಲೀಟರ್ ಮತ್ತು ಬೀರ್ 40,000 ಲೀಟರ್ (ಆವರಣದಲ್ಲಿ ಕೊಟ್ಟಿರುವ ಸಂಖ್ಯೆ 1990–91ರ ಸಾಲಿಗೆ ಸಂಬಂಧಪಟ್ಟವು.) ಕೊನೆಯ ಮೂರು ವಸ್ತುಗಳಿಗೆ ಸಂಬಂಧಿಸಿದಂತೆ 1990–91ರ ವಿವರ ದೊರೆತಿಲ್ಲ.

### ಅಗ್ನಿಶಾಮಕ ದಳ

1989ಕ್ಕೆ ಮೊದಲು ಈ ಜಿಲ್ಲೆಯಲ್ಲಿ ಪ್ರತ್ಯೇಕ ಅಗ್ನಿಶಾಮಕ ದಳವಿರಲಿಲ್ಲ. ಪೋಲೀಸ್ ಇಲಾಖೆಯು ಈ ಕಾರ್ಯವನ್ನು ನಿರ್ವಹಿಸುತ್ತಿದ್ದಿತು. 1989ರ ಆಗಸ್ಟ್‌ನಲ್ಲಿ, ಬೆಂಗಳೂರಿನ ಅಗ್ನಿಶಾಮಕ ಮಹಾನಿರ್ದೇಶಕರ ನಿಯಂತ್ರಣದಲ್ಲಿ ಈ ಕೆಳಕಂಡ ಸಿಬ್ಬಂದಿಯನ್ನು ನೇಮಕ ಮಾಡಲಾಯಿತು ಸಬ್‌ಆಫೀಸರ್-1, ಲೀಡಿಂಗ್ ಫೈರ್‌ಮನ್-2, ಚಾಲಕ 2, ಫೈರ್‌ಮನ್-14 ಮೊತ್ತ-19. 1989ರಲ್ಲಿ 11 ಬಾರಿ, ಮತ್ತು 1990ರಲ್ಲಿ 26 ಬಾರಿ ಇಲಾಖೆಗೆ ಕರೆಬಂದಿದ್ದಿತು. 1989 ಮತ್ತು '90ರಲ್ಲಿ ಅಗ್ನಿಯಿಂದ ನಷ್ಟವಾದ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 1,79,200 ಮತ್ತು ರೂ. 1,58,900 ಹಾಗೂ ಅಗ್ನಿಶಾಮಕ ದಳದ ಸಹಾಯದಿಂದ ರಕ್ಷಿಸಲ್ಪಟ್ಟ ವಸ್ತುಗಳ ಮೌಲ್ಯ ಕ್ರಮವಾಗಿ ರೂ. 12,63,800 ಮತ್ತು ರೂ. 12,38,800.

## ಕಾರಾಗೃಹಗಳು

ಕೊಡಗು ಜಿಲ್ಲೆಯಲ್ಲಿ ರಾಜರ ಕಾಲದಲ್ಲಿ ಕೇಂದ್ರ ಕಾರಾಗೃಹವು ಇದ್ದ ಸ್ಥಳದ ಬಗ್ಗೆ ಯಾವ ದಾಖಲೆಗಳೂ ದೊರೆತಿಲ್ಲ. ಕಾರಾಗೃಹವು ಕೋಟೆಯೊಳಗೆ ಹಾಗೂ ಬೇರೆ ಬೇರೆ ಅರಮನೆಗಳಿಗೆ ಹೊಂದಿಕೊಂಡು ಇದ್ದವು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯೂ ಕೈದಿಗಳನ್ನು ಮಡಿಕೇರಿಯ ಕೋಟೆಯಲ್ಲಿನ ಕಾರಾಗೃಹದಲ್ಲಿ ಇರಿಸುತ್ತಿದ್ದರು. 1868ರಲ್ಲಿ ಕಾರಾಗೃಹದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಮತ್ತು ಕಟ್ಟಡದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಇಂಜಿನಿಯರುಗಳು ಕಾರಾಗೃಹಕ್ಕಾಗಿ ಪ್ರತ್ಯೇಕ ನಿವೇಶನ ಬೇಕೆಂದು ಶಿಫಾರಸು ಮಾಡಿದ್ದರು. ಸೂಕ್ತ ಸ್ಥಳದ ಬಗ್ಗೆ ಭಿನ್ನಾಭಿಪ್ರಾಯವಿದ್ದುದರಿಂದ, ಆಗಿನ ಭಾರತ ಸರ್ಕಾರದ ವೈದ್ಯಕೀಯ ವಿಭಾಗದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರಾದ ಡಾ|| ಓಕ್‌ರವರು ಮಡಿಕೇರಿಗೆ ಭೇಟಿ ಕೊಟ್ಟು, ಮುಖ್ಯ ಇಂಜಿನಿಯರರು ಆರಿಸಿದ್ದ ಸ್ಥಳವನ್ನು ಬಿಟ್ಟು ಸಿವಿಲ್ ವೈದ್ಯಾಧಿಕಾರಿಗಳು ಆರಿಸಿದ್ದ ಸ್ಥಳವನ್ನು, ಕಾರಾಗೃಹಕ್ಕಾಗಿ ಶಿಫಾರಸ್ಸು ಮಾಡಿದರು. ಈ ಸ್ಥಳವನ್ನು ಆಗಿನ ಮುಖ್ಯ ಕಮೀಷನರರೂ ಒಪ್ಪಿದರು. ಕೋಟೆಯೊಳಗಿದ್ದ ಕಾರಾಗೃಹದಲ್ಲಿ ಅನೇಕ ನ್ಯೂನತೆಗಳಿದ್ದವು. ಕೇವಲ 94 ಕೈದಿಗಳಿಗೆ ಮಾತ್ರ ವಸತಿ ವ್ಯವಸ್ಥೆ ಇತ್ತು. ಸರ್ಕಾರದ 1868ನೇಯ ಆದೇಶದಂತೆ, ಕೈದಿಗಳನ್ನು, ಹೊಸದಾಗಿ ಆರಿಸಲ್ಪಟ್ಟ ಸ್ಥಳದಲ್ಲಿ ಕಟ್ಟಿಸಿದ ತಾತ್ಕಾಲಿಕವಾದ ಶೆಡ್ಡುಗಳಲ್ಲಿ ಇರಿಸಿದ್ದರು. ಕ್ರಮೇಣ ಅಲ್ಲಿನ ಕೈದಿಗಳ ಆರೋಗ್ಯ ಕ್ಷೀಣಿಸಿ, ಆ ಸ್ಥಳವು

ವಾಸ ಯೋಗ್ಯವಲ್ಲವೆಂಬ ತೀರ್ಮಾನಕ್ಕೆ ಬರಲಾಯಿತು. ಆರ್ಥಿಕ ಅಡಚಣೆಯಿಂದ ಹೊಸ ಜಾಗದಲ್ಲಿ ಕಟ್ಟಡವನ್ನು ಕಟ್ಟಲಾಗಲಿಲ್ಲ. ಈ ಮಧ್ಯೆ ಕೋಟೆಯೊಳಗಿನ ಕಾರಾಗೃಹವನ್ನು ಬದಲಾಯಿಸಿ ಅನೇಕ ಕಾಮಗಾರಿ ಕೆಲಸಗಳನ್ನು ಮಾಡಲಾಯಿತು. ನಂತರ ಮಡಿಕೇರಿ ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆಯನ್ನು ನಿಯಂತ್ರಿಸಲಾಯಿತು. ಕಡಿಮೆ ಅವಧಿ ಶಿಕ್ಷೆ ಇರುವ ಕೈದಿಗಳು ಹಾಗೂ ವಿಚಾರಣಾ ಕೈದಿಗಳನ್ನು ತಾಲೂಕು ಕಾರಾಗೃಹ ಹಾಗೂ ಲಾಕ್‌ಅಪ್‌ಗಳಲ್ಲಿ ಇಡಲಾಗಿತ್ತು. 1914ರಲ್ಲಿ ಪ್ರಥಮ ಬಾರಿಗೆ ಮಡಿಕೇರಿ ಕಾರಾಗೃಹದಲ್ಲಿ ಮಹಿಳಾ ಕೈದಿಯನ್ನು ಇಡಲಾಗಿತ್ತು. ಈ ಶತಮಾನದ ಪ್ರಾರಂಭದಲ್ಲಿ ಮಡಿಕೇರಿ ಕಾರಾಗೃಹದಲ್ಲಿನ ಕೈದಿಗಳ ಸಂಖ್ಯೆ ಸರಾಸರಿ 68 ಆಗಿದ್ದಿತು. ಕೊಡಗಿನ ಕಾರಾಗೃಹಗಳಿಗೆ 1924ರಲ್ಲಿ ಮದ್ರಾಸಿನ ಬಂಧೀಖಾನೆ ಕೈಪಿಡಿ (ಮ್ಯಾನ್ಯುಯಲ್) ಅನ್ನು, ಅನುಷ್ಠಾನಗೊಳಿಸಲಾಯಿತು. 1920-30ರಲ್ಲಿ ಕೂಡ ಈ ಬಂದೀಖಾನೆಯಲ್ಲಿ ಕೈದಿಗಳ ಸರಾಸರಿ ಸಂಖ್ಯೆ 68 ಆಗಿದ್ದಿತು. ಮಡಿಕೇರಿಯ ಕೇಂದ್ರ ಕಾರಾಗೃಹವಲ್ಲದೆ ನಾಲ್ಕು ಉಪ ಕಾರಾಗೃಹಗಳು ಇದ್ದವು. ನಂತರದ ವರ್ಷಗಳಲ್ಲಿ ಮಡಿಕೇರಿ (ಕೇಂದ್ರ ಕಾರಾಗೃಹ), ವೀರರಾಜಪೇಟೆಯಲ್ಲಿ ಒಂದು ಉಪ ಕಾರಾಗೃಹ ಮತ್ತು 19 ಲಾಕ್‌ಅಪ್‌ಗಳು, ವಿವಿಧ ಪೋಲೀಸ್ ಠಾಣೆಯಲ್ಲಿದ್ದವು. 10 ವರ್ಷಗಳಿಗಿಂತ ಕಡಿಮೆ ಅವಧಿಯ ಶಿಕ್ಷೆ ಅನುಭವಿಸುತ್ತಿದ್ದ ಕೊಡಗಿನ ಕೈದಿಗಳನ್ನು ಮಡಿಕೇರಿ ಕಾರಾಗೃಹದಲ್ಲಿ ಇಟ್ಟಿದ್ದು, ಇತರರನ್ನು ಅಂದಿನ ಮಲಬಾರು ಜಿಲ್ಲೆಯ ಕಣ್ಣಾನೂರಿನ ಕಾರಾಗೃಹಕ್ಕೆ ಕಳುಹಿಸುತ್ತಿದ್ದರು. ಮಹಿಳಾ ಕೈದಿಗಳನ್ನು ವೆಲ್ಲೂರಿನ ಕಾರಾಗೃಹಕ್ಕೆ ಕಳುಹಿಸುತ್ತಿದ್ದರು. 1954-55ರ ಸುಮಾರಿಗೆ ಮಡಿಕೇರಿ ಕಾರಾಗೃಹದಲ್ಲಿ ಇದ್ದ ವಸತಿ ಸೌಕರ್ಯ 129 ಮಂದಿಗೆ ಮಾತ್ರ ; ಮತ್ತು ಆಗ ಇದ್ದ ಕೈದಿಗಳ ಸರಾಸರಿ ಸಂಖ್ಯೆ 59. ಕೊಡಗು ರಾಜ್ಯದ ಆರೋಗ್ಯ ಅಧಿಕಾರಿಗಳು ಮಡಿಕೇರಿ ಕಾರಾಗೃಹಕ್ಕೆ ಪದನಿಮಿತ್ತ ಅಧೀಕ್ಷಕರಾಗಿದ್ದರು ಹಾಗೂ ವೀರರಾಜಪೇಟೆ ತಾಲೂಕಿನ ಸುಬೇದಾರರು, ಅಲ್ಲಿನ ಉಪ ಕಾರಾಗೃಹದ ಅಧೀಕ್ಷಕರಾಗಿದ್ದರು. ಕೊಡಗಿನ ಮುಖ್ಯ ಆಯುಕ್ತರು, ಕಾರಾಗೃಹಗಳ ಇನ್‌ಸ್ಪೆಕ್ಟರ್ ಜನರಲ್ ಆಗಿದ್ದರು. ವೀರರಾಜಪೇಟೆಯಲ್ಲಿನ ಉಪ ಬಂಧೀಖಾನೆಯನ್ನು 1-4-56ರಲ್ಲಿ, ಮುಚ್ಚಲಾಯಿತು.

ಕೊಡಗು ಜಿಲ್ಲೆಯು ನೂತನ ಮೈಸೂರು ರಾಜ್ಯದ ಒಂದು ಜಿಲ್ಲೆಯಾದ ನಂತರ (1956) ಮಡಿಕೇರಿ ಬಂಧೀಖಾನೆಯು ಅಲ್ಲಿಯೇ ಇದ್ದು, ಜಿಲ್ಲಾ ಸರ್ಜನ್ ಅದರ ಅಧೀಕ್ಷಕರಾಗಿದ್ದರು. ವಸತಿ ಸೌಕರ್ಯ ಮೊದಲಿನಂತೆ 129 ಜನರಿಗೆ ಇದ್ದಿತು. 1962ರಲ್ಲಿ ಎಲ್ಲಾ ಬಗೆ ಕೈದಿಗಳ ಸರಾಸರಿ ಸಂಖ್ಯೆ 96 ಮತ್ತು 1963ರಲ್ಲಿ 75. ಈ ಬಂಧೀಖಾನೆಯಲ್ಲಿ ಮಹಿಳಾ ಕೈದಿಗಳಿಗೆ ಪ್ರತ್ಯೇಕ ವಸತಿ ಇದ್ದು, ಮಹಿಳಾ ವಾರ್ಡರ್ ಇದ್ದರು. ಬಂಧೀಖಾನೆಯ ಮೇಲ್ವಿಚಾರಣೆಯನ್ನು ಒಬ್ಬ ಜೈಲರ್ ಹಾಗೂ ಇಬ್ಬರು ವಾರ್ಡರ್‌ಗಳು ಮಾಡುತ್ತಿದ್ದರು. ಬಂಧಿಗಳಿಗಾಗಿ, ಆರು ಬೇರೆ ಬೇರೆ ಕೋಣೆಗಳಿದ್ದು, ಅವರುಗಳಿಗೆ, ಪ್ರತೀ ದಿನ ಬೆಳಿಗ್ಗೆ ದೋಸೆ ಹಾಗೂ ಕಾಫಿ, ಮಧ್ಯಾಹ್ನ ಮತ್ತು ರಾತ್ರಿ ಊಟ ಕೊಡುತ್ತಿದ್ದರು. ಪ್ರತೀ ಪುರುಷ ಕೈದಿಗೆ ಎರಡು ಹೊದಿಕೆ, ಎರಡು ಜುಬ್ಬಾ, ಎರಡು ನಿಕ್ಕರ್, ತಟ್ಟೆ ಹಾಗೂ ಬಟ್ಟಲುಗಳನ್ನು ಕೊಡುತ್ತಿದ್ದರು. ಮನೋರಂಜನೆಗಾಗಿ ರೇಡಿಯೋ ಇಡಲಾಗಿತ್ತು. ಕಾರಾಗೃಹದ ಮೇಲ್ವಿಚಾರಣೆಗೆ ಸರ್ಕಾರೀ ಹಾಗೂ ಸರ್ಕಾರೇತರ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಲಾಗಿತ್ತು. ಹೆಚ್ಚಿನ ಅವಧಿ ಶಿಕ್ಷೆಗೆ ಗುರಿಯಾಗಿರುವ ಕೈದಿಗಳನ್ನು ಮೈಸೂರು ಅಥವಾ ಬೆಂಗಳೂರು ಕಾರಾಗೃಹಗಳಿಗೆ ಕಳುಹಿಸಲಾಗುತ್ತಿತ್ತು. 1963ರಲ್ಲಿ ಮಡಿಕೇರಿ ಕಾರಾಗೃಹಕ್ಕೆ ಆದ ವೆಚ್ಚ ರೂ. 43,248 ಮತ್ತು ಪ್ರತೀ ಕೈದಿಗೆ ಆದ ಖರ್ಚು ರೂ. 574 ಆಗಿದ್ದಿತು.

ಈ ಕಾರಾಗೃಹದಲ್ಲಿ ಸರಾಸರಿ 100 ಅಪರಾಧಿಗಳಿದ್ದು 1990ರಲ್ಲಿ 110 ಅಪರಾಧಿಗಳಿದ್ದರು. 1985–86 ರಿಂದ 1989–90ರ ವರೆಗೆ ಕಾರಾಗೃಹದಲ್ಲಿ ಪ್ರತೀ ಅಪರಾಧಿಗೆ ಆದ ವಾರ್ಷಿಕ ಖರ್ಚು ಈ ರೀತಿ ಇದೆ. 1985–86 ರೂ. 5,673 ; 1986-87 ರೂ. 5,238 ; 1987-88 ರೂ. 8,000 ; 1989-90 ರೂ. 8,263 ಮತ್ತು 1990-91 ರೂ. 8,714, ಈ ಕಾರಾಗೃಹದಲ್ಲಿ 1990ರಲ್ಲಿ ಶೇ. 30 ಅಕ್ಷರಸ್ಥರಿದ್ದರು. ಇಲ್ಲಿನ ವಾರ್ಷಿಕ ವೆಚ್ಚ 1989-90ರಲ್ಲಿ ರೂ. 6.82 ಲಕ್ಷ ; 1990-91ರಲ್ಲಿ ರೂ. 6.75 ಲಕ್ಷ ಮತ್ತು 1991-92 ರಲ್ಲಿ ರೂ. 10.18 ಲಕ್ಷ. ಕಾರಾಗೃಹದಿಂದ ಪರಾರಿಯಾದವರ ಸಂಖ್ಯೆ 1989 ರಿಂದ 1992ರ ವರೆಗೆ – 2 1991 ರಲ್ಲಿದ್ದ ಅಪರಾಧಿಗಳ ವಯೋಮಾನ ಹೀಗಿದೆ : 18 ರಿಂದ 21 ವರ್ಷ-10 ; 21 ರಿಂದ 50 ವರ್ಷ-9 ; 51 ರಿಂದ 80 ವರ್ಷ-2. 1992ರಲ್ಲಿ ಈ ಕಾರಾಗೃಹದಲ್ಲಿದ್ದ ಸಿಬ್ಬಂದಿ-ಜೈಲರ್-1 ; ಪ್ರಧಾನ ವಾರ್ಡರ್-1.

1989-90 ರಲ್ಲಿ ಕೊಡಗು ಜಿಲ್ಲೆಯಲ್ಲಿ ತೀರ್ಮಾನವಾದ ಕ್ರಿಮಿನಲ್ ಮೊಕದ್ದಮೆಗಳ ವಿವರ.

| ವಿವರ | ಸೆಷನ್ಸ್ ಕೋರ್ಟು (ಸೆಷನ್ಸ್ ದಾವೆಗಳು) | ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟು | ಮ್ಯಾಜಿಸ್ಟ್ರೇಟರ ಕೋರ್ಟು |
|---|---|---|---|
| ವರ್ಷಾರಂಭದಲ್ಲಿ ಇದ್ದ ಶಿಲ್ಕು | 127 | 22 | 4,675 |
| ವರ್ಷದಲ್ಲಿ ದಾಖಲಾದ ದಾವೆಗಳು | 42 | 70 | 9,616 |
| ಒಟ್ಟು ದಾವೆಗಳು | 169 | 92 | 14,291 |
| ತೀರ್ಮಾನವಾದ ದಾವೆಗಳು | 11 | 2 | 9,182 |
| ದಾವೆಗೆ ಸಂಬಂಧಪಟ್ಟ ವ್ಯಕ್ತಿಗಳ ಸಂಖ್ಯೆ (ಆರಂಭದಲ್ಲಿ) | 371 | 56 | 10,210 |
| ವಿಚಾರಣೆಗೆ ಗುರಿಯಾದವರು | 105 | 156 | 15,080 |
| ಖುಲಾಸೆ ಆದವರು | 46 | 13 | 3,793 |
| ಶಿಕ್ಷೆಗೆ ಒಳಪಟ್ಟವರು | — | — | 9,762 |
| ದಾವೆ ತೀರ್ಮಾನಿಸಲು ಬೇಕಾದ ಸರಾಸರಿ ದಿನಗಳು | 950 | 154.50 | — |

1990-91 ರಲ್ಲಿ ಕೊಡಗು ಜಿಲ್ಲೆಯಲ್ಲಿ ತೀರ್ಮಾನವಾದ ಕ್ರಿಮಿನಲ್ ಮೊಕದ್ದಮೆಗಳ ವಿವರ.

| ವಿವರ | ಸೆಷನ್ಸ್ ಕೋರ್ಟು (ಸೆಷನ್ಸ್ ದಾವೆಗಳು) | ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟು | ಮ್ಯಾಜಿಸ್ಟ್ರೇಟರ ಕೋರ್ಟು |
|---|---|---|---|
| ವರ್ಷಾರಂಭದಲ್ಲಿ ಇದ್ದ ಶಿಲ್ಕು | 158 | 84 | 5,105 |
| ವರ್ಷದಲ್ಲಿ ದಾಖಲಾದ ದಾವೆಗಳು | 52 | 8 | 8,725 |
| ಒಟ್ಟು ದಾವೆಗಳು | 210 | 92 | 13,830 |
| ತೀರ್ಮಾನವಾದ ದಾವೆಗಳು | 20 | 1 | 6,396 |
| ದಾವೆಗೆ ಸಂಬಂಧಪಟ್ಟ ವ್ಯಕ್ತಿಗಳ (ಸಂಖ್ಯೆ ಆರಂಭದಲ್ಲಿ) | 182 | 91 | 4,341 |
| ವಿಚಾರಣೆಗೆ ಗುರಿಯಾದವರು | 487 | 222 | 11,721 |
| ಖುಲಾಸೆ ಆದವರು | 53 | — | 5,237 |
| ಶಿಕ್ಷೆಗೆ ಒಳಪಟ್ಟವರು | 5 | 1 | 8,199 |
| ದಾವೆ ತೀರ್ಮಾನವಾಗಲು ಬೇಕಾದ ಸರಾಸರಿ ದಿನಗಳು | 760 | 128 | 208 |

1990–91 ರಲ್ಲಿ ಕೊಡಗು ಜಿಲ್ಲೆಯಲ್ಲಿ ಬೇರೆ ಬೇರೆ ಸಿವಿಲ್ ದಾವೆಗಳ ವಿವರ.

| ದಾವೆಗಳು | ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ | | ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ | | ಮುನ್ಸೀಫ್ ಕೋರ್ಟುಗಳು | |
|---|---|---|---|---|---|---|
| | ದಾಖಲಾದದ್ದು | ತೀರ್ಮಾನವಾದದ್ದು | ದಾಖಲಾದದ್ದು | ತೀರ್ಮಾನವಾದದ್ದು | ದಾಖಲಾದದ್ದು | ತೀರ್ಮಾನವಾದದ್ದು |
| ಮೂಲದಾವೆ | 25 | 27 | 113 | 89 | 1,113 | 1,523 |
| ಲಘುವ್ಯಾಜ್ಯಗಳು | — | — | 67 | 99 | 28 | 24 |
| ಜಾರಿದಾವೆ | 56 | 71 | 88 | 126 | 372 | 358 |
| ಇತರೆ | 400 | 327 | 361 | 196 | 404 | 140 |
| ದಿವಾಳಿ ಅರ್ಜಿ | 1 | 2 | — | — | — | — |
| ನಿಯಮಿತ ಅಪೀಲುಗಳು | 11 | 17 | 65 | 40 | — | — |
| ಇತರೆ ಅಪೀಲುಗಳು | 54 | 57 | 17 | 25 | — | — |

(ವರ್ಷಾರಂಭದಲ್ಲಿ ತೀರ್ಮಾನವಾಗದೆ ಇದ್ದ ದಾವೆಗಳ ಸಂಖ್ಯೆ ಇಲ್ಲಿ ಕೊಟ್ಟಿರುವುದಿಲ್ಲ).

1990–91 ರಲ್ಲಿ ಕೊಡಗು ಜಿಲ್ಲೆಯಲ್ಲಿ ಇದ್ದ ನ್ಯಾಯಾಧೀಶರ ಸಂಖ್ಯೆ–ದಾವೆಗಳ ವಿಲೇವಾರಿ ಹಾಗೂ ಖರ್ಚಿನ ವಿವರ :

(ಲಕ್ಷ ರೂ.ಗಳಲ್ಲಿ)

| ನ್ಯಾಯಾಲಯ ಹಾಗೂ ನ್ಯಾಯಾಧೀಶರು | ಮೂಲದಾವೆ– | | ಮೇಲ್ಮನವಿ | | ನ್ಯಾಯಾಲಯಕ್ಕೆ ಪಾವತಿಯಾದ ಹಣ (ರೂ.) | ಖರ್ಚು (ರೂ.) |
|---|---|---|---|---|---|---|
| | ಲಘುವ್ಯವಹಾರಗಳು | ಇತರ | ಮೂಲ | ಇತರೆ | | |
| ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ—1 ಜಿಲ್ಲಾ ನ್ಯಾಯಾಧೀಶರು—1 | 27 | 327 | 17 | 57 | 4.77 | 2.81 |
| ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ—1 ಸಿವಿಲ್ ನ್ಯಾಯಾಧೀಶರು—1 | 420 | 793 | 252 | 103 | 15.71 | 21.83 |
| ಮುನ್ಸೀಫರು ನ್ಯಾಯಾಲಯ—5 ಮುನ್ಸೀಫರು—5 | 1,141 | 141 | — | — | 10.62 | 21.72 |

(ತಾಲೂಕು ಮಟ್ಟದ ಅಂಕೆ ಸಂಖ್ಯೆಗಳು ಪೂರ್ತಿಯಾಗಿ ಬಂದಿಲ್ಲ).

## ಗೃಹರಕ್ಷಕ ದಳ

ಕೊಡಗು ಜಿಲ್ಲೆಯಲ್ಲಿ ಗೃಹರಕ್ಷಕ ದಳದ ಘಟಕಗಳು 31.3-89ರಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಮಡಿಕೇರಿ, ಸೋಮವಾರಪೇಟೆ, ಶನಿವಾರಸಂತೆ, ವೀರರಾಜಪೇಟೆ, ಮೂರ್ನಾಡು, ಪೊನ್ನಂಪೇಟೆ, ಬಾಗಮಂಡಲ ಸಿದ್ದಾಪುರ ಮತ್ತು ಶಾಂತಳ್ಳಿ. ಜಿಲ್ಲೆಯಲ್ಲಿದ್ದ ಸಿಬ್ಬಂದಿಯ ವಿವರ ಹೀಗಿದೆ. ಮಡಿಕೇರಿ ಕಮಾಂಡೆಂಟ್, ಅಡ್ಜುಟೆಂಟ್, ಡಿಸ್ಟ್ರಿಕ್ಟ್ ಕ್ವಾರ್ಟರ್ ಮಾಸ್ಟರ್, ಕಂಪನಿ ಕಮಾಂಡರ್, ಪ್ಲಟೂನ್ ಕಮಾಂಡರ್ ಮತ್ತು ಸಾರ್ಜಂಟ್‌ಗಳು. ಕುಶಾಲನಗರ : ಸ್ಟಾಫ್ ಆಫೀಸರ್, ಸೀನಿಯರ್ ಪ್ಲಟೂನ್ ಕಮಾಂಡರ್ ಮತ್ತು ಸಾರ್ಜಂಟ್. ವೀರರಾಜಪೇಟೆ : ಸೀನಿಯರ್ ಪ್ಲಟೂನ್ ಕಮಾಂಡರ್ ಹಾಗೂ ಸಾರ್ಜಂಟ್. ಶಾಂತಳ್ಳಿ : ಪ್ಲಟೂನ್ ಕಮಾಂಡರ್ ಮತ್ತು ಸಾರ್ಜಂಟ್ಸ್, ಹಾಗೂ ಪೊನ್ನಂಪೇಟೆ, ಭಾಗಮಂಡಲ ಮತ್ತು ಸೋಮವಾರಪೇಟೆಗಳಲ್ಲಿ ಸಹಾಯಕ ಸೆಕ್ಷನ್ ಲೀಡರ್ ಮತ್ತು ಸೆಕ್ಷನ್ ಲೀಡರ್‌ಗಳು ಇದ್ದಾರೆ. ಇದಲ್ಲದೆ ಸೆಕ್ಷನ್ ಲೀಡರ್ ಮತ್ತು ಸಹಾಯಕ ಸೆಕ್ಷನ್ ಲೀಡರ್‌ಗಳು ಇತರ ಕೇಂದ್ರಗಳಲ್ಲೂ ಇದ್ದಾರೆ. ಈ ಇಲಾಖೆಯ ವೆಚ್ಚ 1985-86 ರಿಂದ 1988-89ರ ವರೆಗೆ ಹೀಗಿದೆ. 1985-86 ರೂ. 2.20 ಲಕ್ಷ, 86-87 ರೂ. 3.25 ಲಕ್ಷ, 87-88 ರೂ. 3 ಲಕ್ಷ, 88-89 ರೂ. 5.2 ಲಕ್ಷ.